ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೆ, ''2001ನೇ ಸಾಲಿನ ವಿದ್ಯುಚ್ಚಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು'' ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''2001ನೇ ಸಾಲಿನ ವಿದ್ಯುಚ್ಚಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 2 ಗಂಟೆ 5 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಮಧ್ಯಾಹ್ನ 3-30ಕ್ಕೆ ಪುನರ್ ಸಮಾವೇಶಗೊಂಡಿತು, ಸಭಾಧ್ಯಕ್ಷರು ಶ್ರೀ ಎಂ.ಪಿ.ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ii) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ 2001 ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಎಂ.ಶಿವಣ್ಣ(ಹಣಕಾಸು ಇಲಾಖಾ ರಾಜ್ಯ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೆ, ''2001ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ''

ಪ್ರಸ್ತಾವವನ್ನು ಮಂಡಿಸಲಾಯಿತು

ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಎಲ್ಲಾ ಮಾನ್ಯ ಸದಸ್ಯರ ಸಹಕಾರದಿಂದ ತಂದ ಈ ಮಸೂದೆ ಜಾರಿಗೆ ಬಂದನಂತರ ರಾಜ್ಯದಲ್ಲಿ ಒಂದು ಪ್ರಗತಿಪರ ಮಸೂದೆಯಾಗಿ ಇವ್ಹೊತ್ತು ಉತ್ತಮವಾದ ಪ್ರಗತಿಯೂ ಕೂಡ ಆಗಿದೆ. ಈ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಉತ್ತಮ ಸದುದ್ದೇಶದಿಂದ ಇಲ್ಲಿ ಇನ್ನೂ ಒಂದು ಸಣ್ಣ ತಿದ್ದುಪಡಿ ತರಬೇಕೆಂದು ಹೇಳಿ ಈ ಮಸೂದೆಯನ್ನು ತರಲಾಗಿದೆ. ಇದರ ರೀತ್ಯ ಹಿಂದೆ ಸರ್ಕಾರದ ಇಲಾಖೆಯ ಮೂಲಕವಾಗಿ ಕೈಗೊಳ್ಳಬೇಕಾದ ಕಾಮಗಾರಿಗಳಿಗೆ 5 ಲಕ್ಷ ರೂಪಾಯಿಗಳವರೆಗೆ ವಿನಾಯಿತಿ ಇದ್ದುದ್ದನ್ನು ಈಗ ಇದನ್ನು ವಿಸ್ತರಣೆ ಮಾಡಿ ಒಂದೇ ಅಂದರೆ ಏಕರೂಪದಲ್ಲಿ ಇರಬೇಕೆನ್ನುವ ಉದ್ದೇಶದಿಂದ ಇವ್ಹೊತ್ತು ಈ ಮಸೂದೆಯನ್ನು ತಂದಿದ್ದೇವೆ. ಇದರಲ್ಲಿ ಜಿಲ್ಲಾ ಪಂಚಾಯತಿಗಳು, ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ ಹಾಗೂ ಸರ್ಕಾರದ ಸ್ವಾಮ್ಯಕ್ಕೊಳಪಡುವ ಸಂಸ್ಥೆಗಳಿಗೂ ಕೂಡ ಈ ನಿಯಮ ಏಕರೂಪದಲ್ಲಿ ಅನ್ವಯವಾಗಬೇಕೆನ್ನುವ ದೃಷ್ಟಿಯಿಂದ 5 ಲಕ್ಷ ರೂಪಾಯಿಗಳವರೆಗೆ ವಿನಾಯಿತಿಯನ್ನು ನೀಡಿ ಇವ್ಹೊತ್ತು ಈ ತಿದ್ದುಪಡಿಯನ್ನು ತರಬೇಕಾಗಿದೆ. ಇದರ ಜೊತೆಗೆ ತಾಲ್ಲೂಕು ಪಂಚಾಯತಿ ಮತ್ತು ಪಟ್ಟಣ ಪಂಚಾಯತಿ, ಕಿರು ನೀರಾವರಿ ಯೋಜನೆಗೆ ಮತ್ತು ಶಾಲಾ ಕೊಠಡಿಗಳಿಗೆ 2 ಲಕ್ಷ ರೂಪಾಯಿಗಳವರೆಗೆ ಸೀಮಿತ ಮಾಡಿಕೊಂಡು ಈ ತಿದ್ದುಪಡಿಯನ್ನು ತರಲಾಗಿದೆ. ಇದಕ್ಕೆ ಸದನ ಅಂಗೀಕಾರ ನೀಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ಮಾಡುವಾಗ ಸರಕುಗಳು ಮತ್ತು ಸೇವೆಗಳ ಸಂಗ್ರಹಣೆಗೆ ಒಂದು ಲಕ್ಷ ರೂಪಾಯಿಗಳನ್ನು ಮೀಸಲಾಗಿಡುವುದು.

+ ಶ್ರೀ ಪಿ.ಜಿ.ಆರ್.ಸಿಂಧ್ಯ: ಈ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧದ ಮೊದಲನೆ ಹೆಜ್ಜೆ ಇಷ್ಟೆ, ಇನ್ನೊಂದು ಮುಂಬರುವ ತಿಂಗಳಲ್ಲಿ ಬಯಲಾಗುತ್ತದೆಂದು ನಾವು ಊಹಿಸಿರಲಿಲ್ಲ. ಇವರು ಬಹಳ ದೊಡ್ಡ ಅಸ್ತ್ರಗಳನ್ನು ಭ್ರಷ್ಟಾಚಾರದ ವಿರುದ್ಧ ಬಿಟ್ಟರು ಎಂದರೆ ಅದು ಧರ್ಮಯುದ್ಧ. ಭಾರತ ದೇಶಕ್ಕೆ ಮಾದರಿಯಾಗಿರತಕ್ಕಂಥ ಸರ್ಕಾರ. ಎಲ್ಲವೂ ಪಾರದರ್ಶಕತೆ, ಕ್ಷ-ಕಿರಣಗಳು. ನಾವು ಅಧಿಕಾರಕ್ಕೆ ಬಂದಾಗ ನೀನು ಇಂತಹ ಮಾತುಗಳನ್ನು ಆಡಿದಿರಿ, ಮೊದಲು ಇದರಲ್ಲಿ ಒಂದು ಲಕ್ಷ ರೂಪಾಯಿಗಳು ಇತ್ತು. ಅದನ್ನು ಐದು ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡಿರಿ. ಒಂದು ಲಕ್ಷ ರೂಪಾಯಿವರೆಗೆ ಪೀಸ್ ವರ್ಕ್‌ನಲ್ಲಿ ಯಾವುದಾದರೂ ಕೆಲಸ ಮಾಡಿ ಬಿಟ್ಟರೆ ಅವನಿಗೆ ಆರು ತಿಂಗಳು ಜೈಲು ಶಿಕ್ಷೆ! ಎಷ್ಟು ಜನರನ್ನು ಬಳ್ಳಾರಿ ಗುಲ್ಬರ್ಗ ಮತ್ತು ಸೆಂಟ್ರಲ್ ಜೈಲಿಗೆ ಕಳುಹಿಸಿದ್ದೀರೋ ಎಂಬುದು ನನಗೆ ಗೊತ್ತಿಲ್ಲ ಸ್ವಾಮಿ. ಈಗ ಅದನ್ನು ಐದು ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡು ಹೋಗಿದ್ದೀರಿ.

ಬಹುಶಃ ನನಗೆ ಅನ್ನಿಸುತ್ತದೆ, ಒಂದು ಪಕ್ಷದ ಕಾರ್ಯಕರ್ತರ ಒತ್ತಡ ಜಾಸ್ತಿಯಾಯಿತು, ಅವರ ಒತ್ತಡಕ್ಕೆ ಮಣಿದು ಅವರನ್ನು ತೃಪ್ತಿಪಡಿಸುವುದಕ್ಕೆ ಈ ರೀತಿ ಮಾಡುತ್ತಿದ್ದೀರಿ.

ಶ್ರೀ ಡಿ.ಬಿ.ಚಂದ್ರೇಗೌಡ: ಎಲ್ಲಾ ಪಕ್ಷಗಳ ಒತ್ತಡಕ್ಕೆ ಮಣಿದು ಮಾಡುತ್ತಿರುವುದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾವೇನು ನಿಮಗೆ ಅರ್ಜಿ ಕೊಟ್ಟಿದ್ದವಾ? ಮಾನ್ಯ ಸೋಮಶೇಖರ್, ಮಾನ್ಯ ಎಸ್.ಎಸ್.ಪಾಟೀಲ್ ಹಾಗೂ ಮಾನ್ಯ ಹನುಮೇಗೌಡರು ನಿಮಗೆ ಅರ್ಜಿ ಕೊಟ್ಟರಲಿಲ್ಲ ಅಲ್ಲವೆ? ಸ್ವಾಮಿ, ದೇಶವನ್ನು ಯಾವ ಸ್ಥಿತಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ? Corruption is being legalised in this. ಒಂದು ಕಡೆ ಎಲ್ಓಸಿ ಪ್ರತಿನಿತ್ಯವೂ ಸಹ ಕಟ್-ಆಫ್ ಜಾಸ್ತಿಯಾಗುತ್ತಿದೆ. ಎಲ್ಓಸಿ ವ್ಯಾಲ್ಯೂ ಕಡಿಮೆಯಾಗುತ್ತಿದೆ. ಮಾನ್ಯ ಶಿವಣ್ಣನವರು ಒಳ್ಳೆಯವರು, ಅವರು ಮೂರನೇ ಸಾಲಿನಲ್ಲಿ ಕುಳಿತಿದ್ದಾರೆ, ಅವರು ಮೊದಲನೆ ಸಾಲಿಗೆ ಬರಲಿ ಎಂದು ಆಸೆ. ಅವರ ಹೆಸರಿನಲ್ಲಿ ಎಲ್ಓಸಿ ಫೈನಾನ್ಸ್ ಸೆಕ್ರೆಟರಿ ಹತ್ತಿರ ಹೋಗಿ ರಿಲೀಸ್ ಆಗುತ್ತದಲ್ಲಾ, ಏನು ಇದಕ್ಕೆ ಹೇಳುವುದು ಅದಕ್ಕೇ ನಾನು ಹೇಳುವುದು, ಆ ಕಟ್ ಎಲ್ಲಾ ಹಂತದಲ್ಲೂ ಇದೆ. ಇವತ್ತು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗಿತ್ತು. ಈ ಪಾರದರ್ಶಕತೆ, ಕಂಪ್ಯೂಟರ್ ಸಾಫ್ಟ್‌ವೇರ್ ಬಗ್ಗೆ ಮಾಹಿತಿ ತಂತ್ರಜ್ಞಾನ ಇದೆಲ್ಲಾದರ ಬಗ್ಗೆ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಇದ್ದರೆ ನಾವು ಅವರಿಗೆ ನೇರವಾಗಿ ಹೇಳಬಹುದು. ಅವರು ಮೂರ್ನಾಲ್ಕು ದಿನದಿಂದ ಏಕೋ ಕೋಪ ಮಾಡಿಕೊಳ್ಳುತ್ತಾರೆ. ಏಕೆ ಎಂದು ಅರ್ಥವಾಗುತ್ತಿಲ್ಲ. ಮಾನ್ಯ ಶಿವಣ್ಣನವರೆ, 18 ತಿಂಗಳಲ್ಲಿ ನಿಮ್ಮ ಕುದುರೆಯ ಕಾಲು ಮುರಿದು ಹೋಯಿತಲ್ಲಾ; ಏಕೆ ಎಂಬುದನ್ನು ಹೇಳುತ್ತೇನೆ. ಸ್ವಾಮಿ, ಇದು ಸರಿಯಲ್ಲ. ಐದು ಲಕ್ಷ ರೂಪಾಯಿಗಳವರೆಗೂ ಟೆಂಡರ್ ಕರೆಯದೆ ಪೀಸ್ ವರ್ಕ್‌ನಲ್ಲಿ ಕೊಡುತ್ತೇವೆಂದರೆ, ಆಗ ಎಂಜಿನಿಯರ್ಸ್ ಏನು ಮಾಡುತ್ತಾರೆ ಗೊತ್ತೇ ನಾವು ಆ ಎಂಜಿನಿಯರುಗಳಿಗೆ ಏಕೆ ಬಯ್ಯಬೇಕು ಹೇಳಿ. ನಮ್ಮ ಸುತ್ತ ಮುತ್ತ ಇರುತ್ತಾರಲ್ಲಾ, ಅಧಿಕಾರಿಗಳ ಸುತ್ತಮುತ್ತ ಅಧಿಕಾರಸ್ಥರ ಹತ್ತಿರ ಮೊಬೈಲ್ ಹಿಡಿದುಕೊಂಡು ಅವರು 4,99,000 ರೂ. ಎಂದು ಮಾಡಿ 40-40 ಲಕ್ಷ ರೂಪಾಯಿಗಳ ಕೆಲಸವನ್ನು ತೆಗೆದುಕೊಂಡು ಬಿಡುತ್ತಾರೆ. ಈಗ ಹನ್ನೆರಡೂವರೆ ಲಕ್ಷ ರೂಪಾಯಿಗಳನ್ನು ನಮಗೆ ಕೊಟ್ಟಿದ್ದಾರಲ್ಲಾ ಅದನ್ನು ಮೂರು ಜನಕ್ಕೆ ಇಲ್ಲೇ ಕುಳಿತುಕೊಂಡು ಹಂಚಿಬಿಡಬಹುದು. ಬಹಳ ಸುಲಭವಾದ ಕೆಲಸ. ಇದು ಆಗಬಾರದು, ಇದು ಸರಿಯಲ್ಲ. ಇದರಲ್ಲಿ ದಯಪಟ್ಟು ತಮ್ಮ ಉದ್ದೇಶ ಏನೆಂಬುದು ಅರ್ಥವಾಗುತ್ತಿಲ್ಲ. ಇದೆಲ್ಲಾ ನಿಮಗೆ ಉಪಯೋಗವಾಗುವುದಿಲ್ಲ. This shows already the dissensions within the Ruling Party has started. ನಾನು ನಿಮಗೆ ನೇರವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು: ಅದಕ್ಕೂ, ಇದಕ್ಕೂ ಏನು ಸಂಬಂಧ? ಅದಕ್ಕೆ ಹೇಗೆ ಸಂಬಂಧವಾಗುತ್ತದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ: ನೇರವಾಗಿ ಸಂಬಂಧಪಟ್ಟಿದೆ ಸ್ವಾಮಿ. ಆದುದರಿಂದ ಈಗಲೂ ನಿಮಗೆ ಹೇಳುತ್ತಿದ್ದೇನೆ, ಇದು ಒಳ್ಳೆಯದಲ್ಲ.

ಶ್ರೀ ಎಂ.ಶಿವಣ್ಣ: ಸಿಎಲ್‌ಪಿ ಬಗ್ಗೆ ಇದಕ್ಕೂ.....

ಶ್ರೀ ಪಿ.ಜಿ.ಆರ್.ಸಿಂಧ್ಯ: ಆಯಿತು, ನಾನು ಹೇಳಿದ್ದನ್ನು ವಾಪಸ್ಸು ತೆಗೆದುಕೊಂಡಿದ್ದೇನೆ. ಹೋಗಲಿ ಬಿಡಿ, ಇಲ್ಲಿ ಈಗ ತಾವು ತರುತ್ತಿರುವುದು ಸರಿಯಲ್ಲ. ಒಂದು ಲಕ್ಷ ರೂಪಾಯಿಗಳು ಎಂದು ಇದ್ದುದ್ದನ್ನು ಐದು ಲಕ್ಷ ರೂಪಾಯಿಗಳು ಎಂದು ಹಾಕಿಕೊಂಡಿದ್ದಾರೆ. ನಾನು ಇದರ ಬಗ್ಗೆ ಜಾಸ್ತಿ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಇದನ್ನು ಮಾಡದೇ ಇದ್ದರೆ ನಿಮಗೆ ಹೆಚ್ಚಿಗೆ ಗೌರವ ಬರುತ್ತದೆ. ಇದನ್ನು ಮಾಡಿಕೊಂಡು ಹೋದರೆ ನಿಮಗೆ ತೊಂದರೆಯಾಗುತ್ತದೆ. ಮುಂದಿನ ವರ್ಷ ಹತ್ತು ಲಕ್ಷ ರೂಪಾಯಿಗಳವರೆಗೂ ಮಾಡಬೇಕಾಗುತ್ತದೆ. ಎಲೆಕ್ಷನ್ ಹತ್ತಿರ ಬಂದ ಹಾಗೆ 20 ಲಕ್ಷ ರೂಪಾಯಿಗಳವರೆಗೂ ನೀವು ತೆಗೆದುಕೊಂಡು ಹೋಗಬೇಕಾಗುತ್ತದೆ. ಈ ರೀತಿ ಮಾಡುವುದರಿಂದ ಈ ರಾಜ್ಯಕ್ಕೆ ಅನಾಹುತವಾಗುತ್ತದೆ.

ಶ್ರೀ ಎಂ.ಶಿವಣ್ಣ: ಮೊದಲು ಐದು ಲಕ್ಷ ರೂಪಾಯಿಗಳು ಇದ್ದುದ್ದು. ಸರ್ಕಾರದ ಇಲಾಖೆಗಳಲ್ಲಿ ಅದನ್ನು ತೆಗೆದುಕೊಳ್ಳಬೇಕಾದರೆ ಅದರ ಮಿತಿ 5 ಲಕ್ಷದವರೆಗೆ ಮಾತ್ರ ಏನಾಯಿತಿ ಇತ್ತು. ಅದನ್ನು ಇವತ್ತು ಪ್ರದೇಶಾಭಿವೃದ್ಧಿ ಮಂಡಲಿಗೆ ಅನುಕೂಲವಾಗುವ ದೃಷ್ಟಿಯಿಂದ ಅದನ್ನು ತಂದ್ದಿದೇವೆಯೇ ಹೊರತು ಬೇರೆ ಉದ್ದೇಶ ಏನೂ ಇಲ್ಲ.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಎಲ್ಲಾ ಶಾಸಕರಿಗೆ ಜಿಲ್ಲಾ ಪಂಚಾಯಿತಿಗಳಲ್ಲಿ, ತಾಲ್ಲೂಕು ಪಂಚಾಯಿತಿಗಳಲ್ಲಿ ಹಾಗೂ ನಮ್ಮ ಕ್ಷೇತ್ರಗಳಲ್ಲಿ ಯಾವ ರೀತಿ ನಡೆಯುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಮೊದಲು ಐದು ಲಕ್ಷ ರೂಪಾಯಿಗಳಿಗೆ ಇದ್ದುದ್ದನ್ನು ಒಂದು ಲಕ್ಷ ರೂಪಾಯಿಗಳಿಗೆ ಮಾಡಿದಾಗ ನಾವು ಬಹಳ ಸಂತೋಷ ಪಟ್ಟಿವು. ಆಗ ನಾವು ಸ್ವಾಗತ ಮಾಡಿದ್ದೇವೆ. ಕಾರಣವೇನೆಂದರೆ, ಯಾವ ದೂರುಗಳು ಇತ್ತು, ಜಿಲ್ಲಾ ಪಂಚಾಯತ್ ಮೆಂಬರ್, ತಾಲ್ಲೂಕು ಪಂಚಾಯತ್ ಮೆಂಬರ್ ಅವರುಗಳೇ ಕಂಟ್ರಾಕ್ಟ್‌ದಾರರಾಗಿ ಕಾಮಗಾರಿಯನ್ನು ಮಂಜೂರಾತಿ ಮಾಡಿಸಿಕೊಂಡು ಹೋಗುತ್ತಿದ್ದಾರೆ. ಆ ದೃಷ್ಟಿಯಿಂದ ಒಂದು ಲಕ್ಷ ರೂಪಾಯಿಗಳಾದರೂ ಟೆಂಡರ್ ಕರೆಯಬೇಕೆಂದು ಮಾಡಿದಾಗ ನಾವು ಸಂತೋಷಪಟ್ಟಿವು. ಈಗ ಒಂದು ವರ್ಷವಾದ ತಕ್ಷಣ ಅದನ್ನು ಮತ್ತೆ ಐದು ಲಕ್ಷ ರೂಪಾಯಿಗಳಿಗೆ ಏರಿಸುತ್ತಿದ್ದೀರಿ. ಇದು ಅವರಿಗೆ ಲೈಸನ್ಸ್ ಕೊಟ್ಟ ಹಾಗೆ ಆಯಿತು.

ಜಿಲ್ಲಾ ಪಂಚಾಯತ್ ಮೆಂಬರ್‌ಗಳಿಗೆ, ತಾಲ್ಲೂಕು ಪಂಚಾಯತ್ ಮೆಂಬರ್‌ಗಳಿಗೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಾವೇ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಾಗೂ ಅವರನ್ನು ಯಾರೂ ಸಹ ಕೇಳುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಅವರು ಎಲೆಕ್ಟೆಡ್ ರೆಪ್ರಸೆಂಟೇಟಿವ್ಸ್. ಜಿಲ್ಲಾ ಪಂಚಾಯತ್ ಚೀಫ್ ಸೆಕ್ರೆಟರಿ ಕೂಡ ಅವರನ್ನು ಕೇಳುವುದಕ್ಕೆ ಆಗುವುದಿಲ್ಲ. ಎಕ್ಸಿಕ್ಯುಟೀವ್ ಎಂಜಿನಿಯರ್ಸ್, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಎಂಜಿನಿಯರ್ಸ್ ಅವರ ಜೊತೆ ಮಾತನಾಡುವುದಕ್ಕೆ ಆಗುವುದಿಲ್ಲ. ಅವರು ಏನು ಹೇಳುತ್ತಾರೆ ಅಷ್ಟೇ ಬಿಲ್ ಮಾಡಬೇಕು ಅವರು. ಎರಡು ಲಕ್ಷ ರೂಪಾಯಿಗಳ ಕೆಲಸ ಮಾಡಿ ಐದು ಲಕ್ಷ ರೂಪಾಯಿಗಳಿಗೆ ಬಿಲ್ ಹಾಕಿ ಎಂದರೆ ಹಾಗೆ ಮಾಡಬೇಕು. ಏಕೆಂದರೆ ಇದು ಸುಲಭ, ಬಹಳ ಸುಲಭವಾಗಿ ಮಾಡಿಬಿಟ್ಟಿದ್ದಾರೆ. ಆದುದರಿಂದ ಇದು ಇನ್ನೂ ಭ್ರಷ್ಟಾಚಾರ ಆಗುವುದಕ್ಕೆ ಅನುಕೂಲವಾಗುತ್ತದೆ. ಮತ್ತು ನಿಮ್ಮ ಸರ್ಕಾರಕ್ಕೆ ತುಂಬಾ ಕೆಟ್ಟ ಹೆಸರು ಬರುತ್ತದೆ. ಅದಕ್ಕೆ ಅವಕಾಶ ಕೊಡದೆ ಇದನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು. ಮೊದಲಿನ ಹಾಗೆ ಇದು ಒಂದು ಲಕ್ಷ ರೂಪಾಯಿಗಳು ಇದ್ದರೆ ಒಳ್ಳೆಯದು.

+ ಶ್ರೀ ಏಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲಾ): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಹಿರಿಯ ಸದಸ್ಯರಾದಂತಹ ಮಾನ್ಯ ಸಿಂಧ್ಯರವರು ಹಾಗೂ ಮಾನ್ಯ ಸೋಮಶೇಖರ್‌ರವರು ಏಷಯ ಪ್ರಸ್ತಾಪಿಸಿದಂತೆ ನಾವು ಕಳೆದ ಒಂದು ಒಂದೂವರೆ ವರ್ಷದಲ್ಲಿ ನಮ್ಮ ಕ್ಷೇತ್ರದಲ್ಲಿ ಪ್ರವಾಸ ಮಾಡಿದಾಗ ಜಿಲ್ಲಾ ಪರಿಷತ್ತು ಹಾಗೂ ಬೇರೆ ಬೇರೆ ಎಂಜಿನಿಯರಗಳು ಸ್ವಲ್ಪ ಸಮಾಧಾನವಾಗಿ ಇದ್ದರು. ಏಕೆಂದರೆ ಈಗ ಯಾವುದೇ ಒತ್ತಡ ಬರುತ್ತಿಲ್ಲ, ಎಲ್ಲಾ ಕಾಮಗಾರಿಗಳು ಒಂದು ಲಕ್ಷ ರೂಪಾಯಿಗಳ ಮೇಲೆ ಇದ್ದರೆ ಟೆಂಡರ್ ಕರೆಯಬೇಕೆಂದು ಕಾನೂನು ಇರುವುದರಿಂದ ನಾವು ಒತ್ತಡದಿಂದ ಹೊರತಾಗಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದರು. ಆದರೆ ಈಗ ಈ ತಿದ್ದುಪಡಿ ತರುವುದರಿಂದ ಅವರ ಮೇಲೆ ಯಾವ ಯಾವ ರೀತಿಯ ಒತ್ತಡಗಳು ಬರಬಹುದು ಎನ್ನುವುದನ್ನು ನಾವು ಊಹಿಸಿಕೊಳ್ಳಬಹುದು. ನಮ್ಮ ನಮ್ಮ ಕ್ಷೇತ್ರದಲ್ಲಿ ಕೆಲಸಕಾರ್ಯಗಳನ್ನು ಮಾಡುತ್ತಿರುವವರಿಗೆ ಅದರ ಅನುಭವವಾಗುತ್ತದೆ. ಅಷ್ಟೇ ಅಲ್ಲ ಇದರಿಂದ ಇನ್ನೂ ರಿಲ್ಯಾಕ್ಸೇಷನ್ ಮಾಡುವುದಕ್ಕೆ ಹೋಗಿ, ಶಾಲಾ ಕೊಠಡಿಗಳು ಹಾಗೂ ಕುಡಿಯುವ ನೀರು ಇತ್ಯಾದಿಗಳನ್ನು ಹೇಳುವುದಕ್ಕೆ ಹೋಗಿ ಕಳಪೆ ಮಟ್ಟದ ಕಾಮಗಾರಿಗಳಿಗೆ ನೀವು ಇದರಿಂದ ದಾರಿ ಮಾಡಿಕೊಡುತ್ತಿದ್ದೀರಿ. ಇದು ಆಡಳಿತಾತ್ಮಕವಾಗಿ ಸುಧಾರಣೆಯ ಹೆಜ್ಜೆ ಆಗುವುದಿಲ್ಲ. ಅದು ಕಳಪೆ ಮಟ್ಟದ ಕಾಮಗಾರಿಗಳಿಗೆ ನಾಂದಿಯಾಗುತ್ತದೆ. ಕಳಪೆ ಮಟ್ಟದ ಕಾಮಗಾರಿಗಳಾಗಿದೆ ಎಂದು ನಾವು ಶಾಸಕರು ಹೇಳಿದ್ದಾದರೆ ಅದನ್ನು ತನಿಖೆ ಮಾಡಿಸಬಹುದು ಎಂದು ನೀವು ಹೇಳಬಹುದು. ಆ ತನಿಖೆಗೆ ಎಷ್ಟು ಪತ್ರ ಕೊಟ್ಟಾಗಿದೆ ಎಂದು ನಮಗೆ ಗೊತ್ತಿದೆ. ಆ

ರೀತಿ ಮಾಡುವುದರಿಂದ ಹಾವನ್ನು ಹೊಡೆದು ಹದ್ದಿಗೆ ಹಾಕಿದ ಹಾಗೆ ಆಗುತ್ತದೆ. ನಾವು ತನಿಖೆಗೆ ಕೊಟ್ಟರೆ, ತನಿಖೆ ಮಾಡಲಿಕ್ಕೆ ಹೋಗುವ ಅಧಿಕಾರಿ ಹಾಗೂ ಕೆಲಸ ಮಾಡಿದ ಅಧಿಕಾರಿ ಒಂದಾಗಿ ನಾವು ಕೊಟ್ಟ ಪತ್ರ ಗಾಳಿಗೆ ಹೋಗುತ್ತದೆ. ಅದಕ್ಕೆ ನಾನು ಇತ್ತೀಚೆಗೆ ಪತ್ರ ಬರೆಯುವುದನ್ನು ಬಿಟ್ಟುಬಿಟ್ಟದ್ದೇನೆ. ಆದುದರಿಂದ ಈ ರೀತಿ ರಿಲ್ಯಾಕ್ಸೇಷನ್ ಕೊಡುವುದು ಕಳಪೆ ಕಾಮಗಾರಿಗೆ ನಾಂದಿಯಾಗುತ್ತದೆ, ಆಡಳಿತ ಪಕ್ಷದಿಂದ ಅಧಿಕಾರಿ ವರ್ಗದವರು ವಿಶೇಷವಾಗಿ ಒತ್ತಡಕ್ಕೆ ಸಿಲುಕುತ್ತಾರೆ ಎನ್ನುವುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಈ ರೀತಿ ಒತ್ತಡಕ್ಕೆ ಸಿಲುಕಿ ಯಾರಿಗೋ ಅರ್ಹತೆ ಇಲ್ಲದವರಿಗೆ ತುಂಡು ಗುತ್ತಿಗೆದಾರರಿಗೆ ಅದನ್ನು ಕೊಡುವಂತಹ ಸಂದರ್ಭ ಉಂಟಾಗುತ್ತದೆ. ಈ ಒನ್ನೆಲೆಯಲ್ಲಿ ಪುನರ್‌ಪಿಮರ್ಶೆ ಮಾಡಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ತಾವು ಟೆಂಡರ್ ಮಾಡುವುದಕ್ಕೆ ಡಿಲೇ ಆಗುತ್ತದೆಂದು ಹೇಳಬಹುದು. ಒಂದು ಟೆಂಡರ್‌ಗೆ ಯಾರೂ ಹಾಕುವುದಿಲ್ಲ. ಮೂರು ಟೆಂಡರ್ ಕರೆಯಬೇಕಾಗುತ್ತದೆ. ಒಂದು ಟೆಂಡರ್ ಎಂದರೆ ಇಷ್ಟು ದಿವಸ ಎಂದು ಟೈಂ ಕೊಡಲೇಬೇಕಾಗುತ್ತದೆ. ನಾನು ನಿಮ್ಮ ಟೆಂಡರ್ ಕ್ಲಾಜ್ ಎಲ್ಲಾ ನೋಡಿದ್ದೇನೆ. ಹಾಗಾದರೆ ಶಾರ್ಟ್ ಟೆಂಡರ್ ಕರೆಯಿರಿ. ನಿಮಗೆ ಅಲ್ಪಕಾಲದ ಟೆಂಡರ್ ಕರೆಯುವುದಕ್ಕೆ ಅವಕಾಶವಿದೆ. ಶಾರ್ಟ್ ನೋಟೀಸ್ ಟೆಂಡರ್ ಏಕೆ ಕರೆಯುವುದಿಲ್ಲ? ತುರ್ತಾಗಿ ಕುಡಿಯುವ ನೀರಿನ ಯೋಜನೆ ಹಾಗೂ ಶಾಲಾ ಕೊಠಡಿಗಳ ಕಾಮಗಾರಿ ಮಾಡಬೇಕೆಂದು ಇದ್ದರೆ ಶಾರ್ಟ್ ನೋಟೀಸ್ ಟೆಂಡರ್ ಕರೆಯಿರಿ. ಅದನ್ನು ಮಾಡುವುದಕ್ಕೆ ನೀವೇಕೆ ಮುಂದಾಗುವುದಿಲ್ಲ? ಆದರೆ ಇದನ್ನು ರಿಲ್ಯಾಕ್ಸ್ ಮಾಡುವುದಕ್ಕೆ ಏಕೆ ಹೊರಟಿದ್ದೀರಿ? ವಿಳಂಬವಾಗುತ್ತದೆ ಎಂದರೆ ನೀವು ಶಾರ್ಟ್ ನೋಟೀಸ್ ಟೆಂಡರ್ ಕರೆಯಬೇಕು. ಅಲ್ಲದೆ ಜಿಲ್ಲಾಧಿಕಾರಿಗಳು ಟೆಂಡರ್ ಬಗ್ಗೆ ಬುಕ್‌ಲೆಟ್ ಮಾಡಿ ಪ್ರತಿ ತಿಂಗಳು ಅವರು ಯಾವ್ಯಾವುದು ಟೆಂಡರ್ ಮಾಡಿದ್ದಾರೆ ಎನ್ನುವುದನ್ನು ಬುಲೆಟಿನ್ ಮಾಡುತ್ತಾರೆಂದು ಹೇಳಿದರು. ಯಾವ ಜಿಲ್ಲಾಧಿಕಾರಿಗಳು ಯಾವ ಬುಲೆಟಿನ್ ಮಾಡಿದ್ದಾರೋ ಎಂಬ ಬಗ್ಗೆ ನನ್ನ ಗಮನಕ್ಕೆ ಯಾವುದೂ ಬರಲಿಲ್ಲ. ನಮ್ಮ ಜಿಲ್ಲಾಧಿಕಾರಿಗಳಿಗೆ ನಾನೇ ಒಂದು ಅಧಿಕೃತವಾಗಿ ಪತ್ರವನ್ನು ಬರೆದೆ. ನೀವು ಟೆಂಡರ್ ಬುಲೆಟಿನ್ ಮಾಡಬೇಕೆಂದು ಸರ್ಕಾರದಿಂದ ನಿರ್ಣಯವಾಗಿದೆ, ಒಂದು ಟೆಂಡರ್ ಬುಲೆಟಿನ್ ಕಾಪಿಯನ್ನು ನನಗೆ ಕಳುಹಿಸಿಕೊಡಿ ಎಂದು ಕೇಳಿದ್ದೆ. ಆದರೆ ಅದಕ್ಕೆ ಇವತ್ತಿನವರೆಗೂ ಉತ್ತರ ಬರಲಿಲ್ಲ. ಯಾವ ಜಿಲ್ಲಾಧಿಕಾರಿಗಳು ಟೆಂಡರ್ ಬುಲೆಟಿನ್ ಹೊರಡಿಸುತ್ತಿದ್ದಾರೆ? ಇದು ನಿಶ್ಚಿತವಾಗಿ ಆಡಳಿತ ಪಕ್ಷದ ಕಾರ್ಯಕರ್ತರ ಒತ್ತಡದಿಂದ ಈ ಬಿಲ್ಲನ್ನು ತರತಕ್ಕಂಥಾದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ. ಇದರಿಂದ ನಿಶ್ಚಿತವಾಗಿ ಮುಂದೆ ಬಹಳ ದೊಡ್ಡ ಅನಾಹುತಗಳು ಸೃಷ್ಟಿಯಾಗುವುದಕ್ಕೆ ಅವಕಾಶವಾಗುತ್ತದೆ. ಹಾಗಾಗಿ ಈ ಬಿಲ್ ಅನ್ನು ಪುನರ್ ಪಿಮರ್ಶೆ ಮಾಡಬೇಕು. ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಶಾರ್ಟ್ ನೋಟೀಸ್ ಟೆಂಡರ್ ಕರೆಯುವುದಕ್ಕೆ ಅವಕಾಶ ಇದೆ. ಆ ರೀತಿ ಎಲ್ಲಾ ಯೋಚನೆ ಮಾಡಬೇಕೇ ಹೊರತು ನೀವು ಇದನ್ನು

ರಿಲ್ಯಾಕ್ಸೇಷನ್ ಮಾಡುವುದಕ್ಕೆ ಹೋದರೆ ತೊಂದರೆಯಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

+ ಶ್ರೀ ಸಿ.ಚನ್ನಿಗಪ್ಪ(ಕೊರಟಗೆರೆ): ಮಾನ್ಯ ಅಧ್ಯಕ್ಷರೇ, ಸರ್ಕಾರ ಅಧಿಕಾರಕ್ಕೆ ಬಂದ ಮೂರು ತಿಂಗಳಲ್ಲಿ ಪಾರದರ್ಶಕವಾದ ಸರ್ಕಾರ, ಪ್ರಾಮಾಣಿಕವಾದಂತಹ ಸರ್ಕಾರ, ಲಂಚವನ್ನು ಸಂಪೂರ್ಣವಾಗಿ ತೆಗೆದು ಹಾಕುತ್ತೇವೆಂದು ಆಶ್ವಾಸನೆಯ ರೂಪದಲ್ಲಿ ಈ ಸದನದಲ್ಲಿ ಹೇಳಿದ್ದರು. ಆದರೆ ಇವತ್ತು ಇವರು ತಂದಿರುವ ತಿದ್ದುಪಡಿ ಬಿಲ್‌ಗೆ ಅಂಗೀಕಾರ ತೆಗೆದುಕೊಂಡು ಅದನ್ನು ಮಾಡುವುದಾದರೆ ಇನ್ನೂ ಹೆಚ್ಚಿಗೆ ಕರಪ್ಷನ್‌ಗೆ ದಾರಿ ಮಾಡಿಕೊಟ್ಟಂತಹ ಸಂದರ್ಭ ಉಂಟಾಗುಬಹುದೆಂದು ನಾನು ಹೇಳಲಿಚ್ಚಿಸುತ್ತೇನೆ. ನಾವು ಇಲ್ಲಿ ತಿದ್ದುಪಡಿಯ ಮಹತ್ವನ್ನು ಅರ್ಥ ಮಾಡಿಕೊಂಡಾಗ ನಾವು ತಾಲ್ಲೂಕು ಪಂಚಾಯತ್‌ಗಳಲ್ಲಿ ಹಾಗೂ ಜಿಲ್ಲಾ ಪಂಚಾಯತ್‌ಗಳಲ್ಲಿ ಕೆಲಸವನ್ನು ಮಾಡುತ್ತೇವೆ. ಪ್ರತಿ ತಾಲ್ಲೂಕುಗಳಲ್ಲೂ ನಾನ್ ಪ್ಲಾನ್ ಅಮೌಂಟ್ ನಾಲ್ಕು ಲಕ್ಷ ರೂಪಾಯಿಗಳನ್ನು ತಲಾವಾರು ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಹಂಚಿ ಆ ಮುಖೇನಾ ಟೆಂಡರ್‌ಗಳನ್ನು ಕರೆದು ಉತ್ತಮವಾದಂತಹ ಕೆಲಸವನ್ನು ಮಾಡುವಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿದ್ದರು, ಅದನ್ನು ನಾವೆಲ್ಲರೂ ಸ್ವಾಗತ ಮಾಡಿದ್ದೆವು. ಆಗ ನಾವು ಈ ಸರ್ಕಾರ ಬಂದು ಒಂದು ಉತ್ತಮವಾದಂತಹ ಕೆಲಸವಾಯಿತಲ್ಲಾ, ಆಡಳಿತದಲ್ಲಿ ಒಂದು ಉತ್ತಮವಾದಂತಹ ವ್ಯವಸ್ಥೆಯಾಗಿದೆ ಎಂದು ಪ್ರತಿಯೊಬ್ಬರೂ ಹೇಳುತ್ತಿದ್ದರು. ಈವತ್ತು ಪಳ್ಳಿಗಳ ಕಡೆಗಳಲ್ಲಿ ಕಂಟ್ರಾಕ್ಟ್‌ದಾರರಿಗೆ ಈಗ ನಾವು ಕರಪ್ಷನ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಕಳಪೆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ, ಟೆಂಡರ್ ಕರೆದ ಮೇಲೆ ಅದು ಅಪ್ರೂವ್ ಆದ ಮೇಲೆ ಅದರ ಲೈಸನ್ಸ್ ಅನ್ನು ಕ್ಯಾನ್ಸಲ್ ಮಾಡುತ್ತಾರೆ, ಮತ್ತೆ ನಮ್ಮನ್ನು ಈ ಕಂಟ್ರಾಕ್ಟರ್ ಕೆಲಸದಿಂದಲೂ ತೆಗೆದುಹಾಕುತ್ತಾರೆಂಬ ಭಯವೂ ಅವರಿಗೆ ಇತ್ತು, ಮತ್ತೆ ಅಧಿಕಾರಿಗಳು ಟೆಂಡರ್‌ಗಳನ್ನು ಕರೆದ ಮೇಲೆ ಒಬ್ಬರು ಶಾಸಕರನ್ನೋ ಅಥವಾ ಜಿಲ್ಲಾ ಪಂಚಾಯತ್ ಸದಸ್ಯರನ್ನು ಕಾಂಟ್ರಾಕ್ಟ್ ಮಾಡುವಂತಹ ಪ್ರಮೇಯವೂ ಇರಲಿಲ್ಲ. ಅವರು ಟೆಂಡರ್ ಪ್ರಕಾರ ಕೆಲಸವನ್ನು ಮಾಡಿಸಿ, ಅದು ಮುಗಿದ ನಂತರ ಬಿಲ್‌ನ ಹಣವನ್ನು ಕೊಡುವಂತಹ ಕೆಲಸ ಮಾಡುತ್ತಿದ್ದವು. ಇದು ಸರ್ಕಾರ ಮಾಡಿದಂಥಾದ್ದು ಉತ್ತಮವಾದಂತಹ ಕೆಲಸವಾಗಿತ್ತು. ಆದರೆ ಈಗ ಏನು ತಿದ್ದುಪಡಿಯನ್ನು ತಂದು ಇವರು 5 ಲಕ್ಷ ರೂಪಾಯಿಗಳಿಗೆ ಏರಿಸಿದ್ದಾರೆ, ಇವರು ಒಂದು ಲಕ್ಷ ರೂಪಾಯಿಗಳಿಂದ 5 ಲಕ್ಷ ರೂಪಾಯಿಗಳಿಗೆ ಏರಿಸುತ್ತೇವೆಂದು ಹೇಳಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನೆಲಮಂಗಲದ ತ್ಯಾಮಗೊಂಡ್ಲುಏನಲ್ಲಿ ಕಳ್ಳಿಪಾಳ್ಯ ಎಂಬ ಊರಿನಲ್ಲಿ ಒಬ್ಬರು ಒಂದು ಲಕ್ಷ ರೂಪಾಯಿಗಳಿಗೆ ಟೆಂಡರ್ ಆಗಿತ್ತು, ಅವರು ಕೆಲಸವನ್ನು ಮಾಡಿದರು. ಟೆಂಡರ್‌ಗೆ ಒಂದು ವಾರ ಮುಂಚಿತವಾಗಿ ಕೆಲಸ ಮಾಡಿದ್ದಕ್ಕೆ ಅವರ

ಬಿಲ್ ಮಾಡದೇ ಈಗ ಒಂದೂವರೆ ವರ್ಷವಾಗಿದೆ. ಅಲ್ಲಿ ಆ ಹುಡುಗ ಉತ್ತಮವಾದಂತಹ ಕೆಲಸವನ್ನು ಮಾಡಿದ್ದ, ಇವತ್ತು ಅದೇ ರೀತಿಯಲ್ಲಿ ಟೆಂಡರ್ ಅನ್ನು ಕರೆದು ಕೆಲಸವನ್ನು ಮಾಡಿಸಿದ್ದರೆ ಆ ಕೆಲಸವೂ ಉತ್ತಮವಾಗುತ್ತಿತ್ತು. ಮತ್ತೆ ಇದರಿಂದ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತಾ ಇತ್ತು. ಆದರೆ ಇವತ್ತು ಏನಾಗುತ್ತದೆಂದರೆ 5 ಲಕ್ಷ ರೂಪಾಯಿಗಳು ಎಂದ ತಕ್ಷಣ ಇದರ ಬಗ್ಗೆ ನಮ್ಮ ನಾಯಕರಾದ ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಹೇಳಿದ ಹಾಗೆ 4 ಲಕ್ಷ 99 ಸಾವಿರ ರೂಪಾಯಿಗಳಿಗೆ ಬಿಲ್ ಮಾಡಿಕೊಳ್ಳುತ್ತಾರೆ, ಈ ನಲವತ್ತು ಲಕ್ಷ ರೂಪಾಯಿಗಳನ್ನು ನಾಲ್ಕೂ, ಐದೋ, ಆರೋ, ಪಂಗಡಗಳು ಎಂದು ಮಾಡಿಕೊಂಡು ಕೆಲಸವನ್ನು ಮಾಡಿಸುತ್ತಾರೆ. ಇಲ್ಲಿ ಯಾವುದೇ ರೀತಿಯಲ್ಲಿ ಉತ್ತಮವಾದಂತಹ ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ನಾವು ಹೇಳುವಂಥಾದ್ದು ಸರ್ಕಾರ ಪಾರದರ್ಶಕತೆ ಎಂದು ಹೇಳುತ್ತದೆ, ನಾವು ಅದನ್ನು ಒಪ್ಪತಕ್ಕಂಥ ವಿಚಾರವೂ ಆಗಿದೆ. ಆದರೆ ಇವತ್ತು ಇವರು ಮಾಡುತ್ತಿರುವಂಥಾದ್ದಕ್ಕೆ ಪಾರದರ್ಶಕತೆಗೆ ಅರ್ಥವಿಲ್ಲ. ಆದುದರಿಂದ ದಯಮಾಡಿ ಮಾನ್ಯ ಸಚಿವರು ಇವತ್ತು ಏನು ಈ ಬಿಲ್ ಪಾಸ್ ಮಾಡಬೇಕೆಂದು ಸದನದಲ್ಲಿಟ್ಟಿದ್ದಾರೆ, ಅದನ್ನು ಹಿಂದಕ್ಕೆ ತೆಗೆದುಕೊಳ್ಳುವಂಥಾದ್ದು ಉತ್ತಮವೆಂದು ಹೇಳುತ್ತೇನೆ. ಈ ಕರ್ನಾಟಕ ರಾಜ್ಯದ ಆಡಳಿತ ದೃಷ್ಟಿಯಿಂದ ಮತ್ತು ಪಾರದರ್ಶಕತೆಯ ದೃಷ್ಟಿಯಿಂದ ಮತ್ತೆ ನಾವು ಉತ್ತಮ ಕೆಲಸವನ್ನು ಮಾಡಬೇಕಾದ ದೃಷ್ಟಿಯಿಂದ ಇದನ್ನು ವಾಪಸ್ಸು ತೆಗೆದುಕೊಂಡು ಪುನರ್ ಪರಿಶೀಲನೆ ಮಾಡುವಂಥಾದ್ದು ಉತ್ತಮವೆಂದು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಕೆ ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ಈ ಬಿಲ್ ತಂದಿರುವಂಥಾದ್ದು ಇದರಲ್ಲಿ ಒಂದು ಲಕ್ಷ ರೂಪಾಯಿಗಳೆಂದು ಮಾಡಿದ್ದು, ಈಗ ಅದನ್ನು ಐದು ಲಕ್ಷ ರೂಪಾಯಿಗಳೆಂದು ಏಕೆ ಮಾಡುತ್ತಿದ್ದಾರೆ? ಇದನ್ನು ಯಾರೂ ಹೇಳಿರಲಿಲ್ಲ, ಇದನ್ನು ಒಂದು ಲಕ್ಷ ರೂಪಾಯಿಗಳು ಎಂದು ಮಾಡಿದಾಗ ಇದಕ್ಕೆ ಯಾರದ್ದೂ ಏನು ಒತ್ತಡವೂ ಇರಲಿಲ್ಲ. ಈಗ ಇವರು ಪುನಃ ಐದು ಲಕ್ಷ ರೂಪಾಯಿಗಳನ್ನು ಮಾಡುತ್ತೇವೆಂದು ಹೇಳಿದಾಗ ಅದರಲ್ಲಿ ಅರ್ಥವಾಗುತ್ತದೆ. This is very transparent. ಇದು ಎದ್ದು ಕಾಣುತ್ತಿದೆ. ಇದನ್ನು ಪತಕ್ಕಾಗಿ ಮಾಡುತ್ತಿದ್ದಾರೆಂಬುದು ಎದ್ದು ಕಾಣುತ್ತದೆ. ಇವತ್ತು ನಾವು ಒಂದು ಲಕ್ಷ ರೂಪಾಯಿಗಳ ಟೆಂಡರ್ ಆಗಿರುವಂಥಾದ್ದು ಗೊತ್ತಿಲ್ಲ, ನೋಟಿಫಿಕೇಷನ್ ಆಗಿರುವಂಥಾದ್ದು ಗೊತ್ತಿಲ್ಲ, ಮತ್ತೆ ಇದನ್ನು ಬೋರ್ಡ್‌ಗೆ ಹಾಕಿರುವಂಥಾದ್ದನ್ನು ನಾವು ನೋಡಿಲ್ಲ. ಅಲ್ಲಿ ಅನೇಕ ಜನರು ಅಲ್ಲೆ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಿದ್ದಾರೆ, ಈಗ ಮತ್ತೆ ಐದು ಲಕ್ಷ ರೂಪಾಯಿಗಳೆಂದು ಮಾಡಿದರೆ ಇನ್ನು ಏನು ತೊಂದರೆಯೇ ಆಗುವುದಿಲ್ಲ. ನೀವು ಇದನ್ನು ಪಿಡಿತದಲ್ಲಿ ತರುತ್ತೇವೆಂದು ಹೇಳಿ, ಮತ್ತೆ ಇದನ್ನು

ರಿಲ್ಯಾಕ್ಸ್ ಮಾಡುವುದನ್ನು ನೋಡಿದರೆ ಇದಕ್ಕೆ ಒತ್ತಡವೂ ಇರಬಹುದು. ನಮ್ಮ ಸಹೋದ್ಯೋಗಿಯೊಬ್ಬರು ಹೇಳುತ್ತಿದ್ದರು, ನಮ್ಮ ಮಂತ್ರಿಗಳೊಬ್ಬರು ಭಾಷಣ ಮಾಡುವಾಗ 5 ಲಕ್ಷ ರೂಪಾಯಿಗಳನ್ನು ಮಾಡುತ್ತಿದ್ದೇವೆ, ನೀವು ಕಾರ್ಯಕರ್ತರೂ ಎಲ್ಲವನ್ನೂ ಮಾಡಿಕೊಳ್ಳಿ ಎಂದು ಹೇಳಿದರಂತೆ. It is a fact. ಈ ಪರಿಸ್ಥಿತಿಯಲ್ಲಿ ತಾವು ಪುನಃ ಇದನ್ನು ಜಾರಿಗೆ ತಂದರೆ ಈಗ ಐದು ಲಕ್ಷ ರೂಪಾಯಿಗಳು ಎಂದು ಇದ್ದರೆ, 15 ಲಕ್ಷ ರೂಪಾಯಿಗಳ ಕೆಲಸಮಿದ್ದರೆ, ಈ ಹೆಚ್ಚುವರಿಗೆ ಏನು ಮಾಡುತ್ತಿದ್ದರು, ಎಂದರೆ ಒಂದೂವರೆ ಲಕ್ಷ ರೂಪಾಯಿಗಳಂತೆ ಮೂರು ಭಾಗ ಮಾಡಿಕೊಳ್ಳುತ್ತಿದ್ದರು, ಈಗ ಐದು, ಐದು ಲಕ್ಷವೆಂದು ಮೂರು ಭಾಗ ಮಾಡಿ straight away you can entrust upto Rs.20 lakhs work. ಮಾಡುವುದಕ್ಕೆ ಏನೂ ತೊಂದರೆ ಇಲ್ಲ. ಈಗ ಅವರ ಎಕ್ಸ್‌ಪೀರಿಯನ್ಸ್ ಏನು? ಈಗ ಇದನ್ನು ತಂದಿರುವುದರಿಂದ ತೊಂದರೆ ಏನು ಆಗಿದೆ, ಅದನ್ನು ಮಾನ್ಯ ಮಂತ್ರಿಯವರು ಹೇಳಬೇಕಾಗುತ್ತದೆ. ಮಾನ್ಯ ಏಶ್ವೇಶ್ವರ ಹೆಗಡೆಯರು ಹೇಳಿದಂತೆ ಕಡಿಮೆ ಕಾಲಾವಧಿಯ ಟೆಂಡರ್ ಕರೆದಾಗ ತಕ್ಷಣ ಕೆಲಸವನ್ನು ಮಾಡಿಸುವುದಕ್ಕೆ ತೊಂದರೆಯಾಗುವುದಿಲ್ಲ, ಮತ್ತೆ ನಿಧಾನವೂ ಆಗುವುದಿಲ್ಲ. ಆದುದರಿಂದ ದಯವಿಟ್ಟು ಈ ಬಿಲ್ ಅನ್ನು ಪುನರ್ ಪರಿಶೀಲನೆ ಮಾಡಿ, ಇದನ್ನು ಪಾಸ್ ಮಾಡಿ ಗೊಂದಲವನ್ನುಂಟು ಮಾಡಬೇಡಿ. You need to read between the lines. ಮೊನ್ನೆ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಂತಹ ಸಂದರ್ಭದಲ್ಲಿ ಈ ದಂಧೆ ನಮ್ಮ ಹತೋಟಿಯಲ್ಲಿದೆ ಎಂದು ಹೇಳಿದರು, ಅಂದರೆ ಈ ಭ್ರಷ್ಟಾಚಾರ ಹತೋಟಿಗೆ ಬಂದಿದೆಯಾ? ನಾನು ಹೇಳುವಂಥಾದ್ದು, ದಯವಿಟ್ಟು ಈ ಬಿಲ್ ಅನ್ನು ವಾಪಸ್ಸು ಪಡೆಯಿರಿ ಎಂದು ತಮ್ಮ ಮುಖೇನಾ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

+ ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ): ಮಾನ್ಯ ಅಧ್ಯಕ್ಷರೇ, ಈ ವಿಷಯವಾಗಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಷಯ ಸಮಿತಿಯವರು ಒಂದು ಶಿಫಾರಸ್ಸನ್ನು ಪಾಸ್ ಮಾಡಿದ್ದಾರೆ. ಇದನ್ನು ಮಾನ್ಯ ಮಂತ್ರಿಯವರು ಓದಿದ್ದಾರೋ, ಇಲ್ಲವೋ ಗೊತ್ತಿಲ್ಲ, ಗ್ರಾಮ ಪಂಚಾಯತ್‌ನಲ್ಲಿ ಯಾವುದೇ ಕೆಲಸವನ್ನು ಮಾಡಬೇಕಾದರೆ ಟೆಂಡರ್ ಮುಖಾಂತರ ಆಗಬೇಕೆಂದು ಪ್ರತಿ ಪಂಚಾಯತ್‌ನಲ್ಲೂ, ತಾಲ್ಲೂಕುಗಳಲ್ಲೂ ಗುತ್ತಿಗೆದಾರರ ಪಟ್ಟಿಯನ್ನು ಇಡಬೇಕೆಂದು ಹಾಗೂ ಪಂಚಾಯತ್ ಮೂಲಕ ಕೈಗೊಳ್ಳುವ ಎಲ್ಲಾ ಕಾಮಗಾರಿಗಳನ್ನು ಸರಳವಾದಂತಹ ಟೆಂಡರ್ ಮೂಲಕವೇ ಮಾಡಿಸಬೇಕೆಂದು ಸಮಿತಿಯೂ ಶಿಫಾರಸ್ಸು ಮಾಡುತ್ತದೆ. ಈ ಸಮಿತಿಯಲ್ಲಿ ಎಲ್ಲಾ ಪಕ್ಷದ ಸದಸ್ಯರುಗಳು ಇದ್ದಾರೆ, ನಿಮ್ಮ ಪಕ್ಷದ ಸದಸ್ಯರೇ ಅಧ್ಯಕ್ಷರು ಆಗಿದ್ದರು, ಅವರು ಮಾನ್ಯ ಯಾವಗಲ್‌ರವರು ಅನುಭವಸ್ಥರು, ಅವರು

ಮೊದಲಿನಿಂದಲೂ ಕೆಲಸ ಮಾಡಿಕೊಂಡು ಬಂದಿರುವವರಾಗಿದ್ದಾರೆ. ಇಲ್ಲಿ ಏನಾಗಿದೆ ಎಂದರೆ, ಒಂದು ರೀತಿಯಲ್ಲಿ 5 ಲಕ್ಷ ರೂಪಾಯಿಗಳಿಂದ 1 ಲಕ್ಷ ರೂಪಾಯಿಗಳಿಗೆ ಇಳಿಸಿದಾಗ ನಾವು ನಿಮ್ಮನ್ನು ಹೊಗಳಿದೆವು. ನಾನು ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನ ಊರಿನಲ್ಲಿ ಟೆಂಡರ್ ಇಲ್ಲದೇ ಒಂದು ಕೆಲಸವನ್ನು ಎರಡು ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದರು, ಅವನು ಆ ಕೆಲಸವನ್ನು ಮಾಡಿದನು. ಇದಾದ ಮೇಲೆ ನಾವು ಮತ್ತೊಂದು ಕೆಲಸಕ್ಕೆ ಟೆಂಡರ್ ಕರೆಯಬೇಕೆಂದು ಹೇಳಿದೆ. ಅದು ಶೇ.18ರಷ್ಟು ಕಡಿಮೆಗೆ ಆಯಿತು, ಸುಮಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ನಮಗೆ ಸಾವಿರ ರೂಪಾಯಿಗಳಿಂದ 15 ನೂರು ಕೋಟಿ ರೂಪಾಯಿಗಳು ವರ್ಷಕ್ಕೆ ಉಳಿಯುತ್ತದೆ. ಈಗ ನಾವು ಈ ಟೆಂಡರ್ ಮಾಡುವುದರಿಂದ ನಮಗೆ ಒಂದು ನೂರು ರೂಪಾಯಿಗಳು ಸಾಲ ತರಬೇಕೆಂದರೂ ಹುಡ್ಕೋಗೆ ಎಷ್ಟು ಸಾರಿ ಓಡಾಡುತ್ತೇವೆ. ವರ್ಲ್ಡ್ ಬ್ಯಾಂಕ್‌ನಿಂದ ಎರಡು ನೂರು ಕೋಟಿ ರೂಪಾಯಿಗಳನ್ನು ಸಾಲ ತರಬೇಕೆಂದರೂ ಎಷ್ಟು ಸಾರಿ ಓಡಾಡುತ್ತೇವೆ. ನಾವು ಪ್ರಾಮಾಣಿಕವಾಗಿ ಪ್ರತಿ ಇಲಾಖೆಗಳಲ್ಲೂ ಟೆಂಡರ್ ಕರೆಯುವಂತಹ ವಿಚಾರದಲ್ಲಿ ಸಾವಿರ ರೂಪಾಯಿಗಳಿಂದ ಹದಿನೈದು ಸಾವಿರ ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ. ಈಗ ನೀವು ಐದು ಲಕ್ಷ ರೂಪಾಯಿಗಳನ್ನು ಮಾಡುವುದರಿಂದ ಎಲ್ಲರಿಗೂ ಪೀಸ್ ವರ್ಕ್ ಎಂದು ಕೊಡುವುದರಿಂದ ರಾಜ್ಯಕ್ಕೆ ಬಹಳ ದೊಡ್ಡ ಹಾನಿಯಾಗುತ್ತದೆ. ನಾನು ಹೆಚ್ಚಿಗೆ ಏನನ್ನು ಹೇಳುವುದಕ್ಕೆ ಹೋಗುವುದಿಲ್ಲ, ಈ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಷಯ ಸಮಿತಿಯವರು ಏನು ವಿಚಾರಸ್ಸು ಮಾಡಿದ್ದಾರೆ ಅದನ್ನು ತಾವು ದಯವಿಟ್ಟು ಓದಬೇಕು, ಬೇಕಾದರೆ ನಾಳೆ ಈ ಬಿಲ್ ತೆಗೆದುಕೊಳ್ಳೋಣ. ಇದರ ಬಗ್ಗೆ ತಾವು ವಿಚಾರ ಮಾಡಿ, ಇದರಿಂದ ರಾಜ್ಯಕ್ಕೆ ಹಾನಿಯಾಗುತ್ತದೆ. ಇದರಿಂದ ಸಾವಿರಾರು ಕೋಟಿ ರೂಪಾಯಿಗಳ ಹಾನಿಯಾಗುತ್ತದೆ. ಇವತ್ತು ನಮ್ಮ ರಾಜ್ಯದ ಪರಿಸ್ಥಿತಿ ಹೇಗಿದೆ ಎಂದರೆ ಇನ್ನೈದು ವರ್ಷಗಳಲ್ಲಿ ಪಗಾರ ಕೊಡಲಾಗದಂತಹ ಪರಿಸ್ಥಿತಿ ಬರುತ್ತದೆ. ಇವರು ಈಗ ಇಂತಹ ಬಿಲ್‌ಗಳನ್ನು ತಂದು ರಾಜ್ಯವನ್ನು ಹಾಳು ಮಾಡುತ್ತಿದ್ದಾರೆ. ಆದುದರಿಂದ ನಾನು ತಮ್ಮ ಮುಖಾಂತರ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಹೇಳುವುದೇನೆಂದರೆ ಈ ಸಮಿತಿಯ ವರದಿಯನ್ನು ಅವರು ಓದಿರಬಹುದು. ಇದೆಲ್ಲವನ್ನೂ ತಾವು ಹೇಳಬೇಕಾಗುತ್ತದೆ. ತಾವೇ ಈ ವಿಷಯ ಸಮಿತಿಗಳನ್ನು ಮಾಡಿದ್ದೀರಿ, ಮಾನ್ಯ ಅಧ್ಯಕ್ಷರೇ, ತಾವು ಸರ್ಕಾರಕ್ಕೆ ಬುದ್ಧಿವಾದವನ್ನು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ರಾಜ್ಯಕ್ಕೆ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಾನಿಯಾಗುತ್ತದೆ. ಆದುದರಿಂದ ಮತ್ತೊಮ್ಮೆ ತಮ್ಮಲ್ಲಿ ಏನಂತಿ ಮಾಡಿಕೊಳ್ಳುವುದೇನೆಂದರೆ, ಈ ಬಿಲ್ ಅನ್ನು ಒಂದಕ್ಕೆ ತೆಗೆದುಕೊಂಡು ಮತ್ತೊಮ್ಮೆ ವಿಚಾರ ಮಾಡಿ ಎಂದು ಹೇಳುತ್ತೇನೆ. ಇನ್ನು ನಾಲ್ಕಾರು ದಿವಸಗಳು ಸಮಯವಿದೆ, ತಾವು ಸಮಿತಿ ಸದಸ್ಯರುಗಳೆಲ್ಲರನ್ನೂ ಕರೆದು ನಂತರ ಈ ಬಿಲ್ ತರಬೇಕೆಂದು

ಮತ್ತೊಮ್ಮೆ ತಮ್ಮ ಮೂಲಕ ಅವರನ್ನು ಕೇಳಿಕೊಂಡು ನಾನು ಈ ಬಿಲ್ ಅನ್ನು ವಿರೋಧಿಸುತ್ತಿದ್ದೇನೆ.

ಶ್ರೀ ಪಿ.ಕೃಷ್ಣಪ್ಪ(ದೊಡ್ಡಬಳ್ಳಾಪುರ): ಮಾನ್ಯ ಅಧ್ಯಕ್ಷರೇ, ನಾವು ಬೆಳಿಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಒಂದು ಲಕ್ಷ ರೂಪಾಯಿಗೆ ಕೆಲಸವನ್ನು ಮಾಡಿದರೆ ಬಹಳ ಉತ್ತಮವಾಗಿ ಕೆಲಸವನ್ನು ಮಾಡಬಹುದೆಂದು ನಾವು ಹೇಳಿದೆವು. ಈ ಕಡೆ ಇರುವ ಮತ್ತೆ ಆ ಕಡೆಯಲ್ಲಿರುವಂತಹ ಸದಸ್ಯರೆಲ್ಲರಿಗೂ ಗೊತ್ತು. ಈಗ ಜಿಲ್ಲಾ ಪಂಚಾಯತ್‌ಗೆ ಮತ್ತು ಗ್ರಾಮ ಪಂಚಾಯತ್‌ಗಳಲ್ಲಿ ಒಂದು ರೀತಿಯಾಗಿ ವಿಶ್ವಾಸವಿದೆ. ಈಗ ಆ ಕೆಲಸದಲ್ಲಿ ಟೆಂಡರ್ ಕರೆದಾಗ ಏನು ಕಂಡೀಷನ್ಸ್ ಇರುತ್ತದೆ, ಅದಕ್ಕೆಲ್ಲಾ ಒಳಪಡಬೇಕಾಗುತ್ತದೆ. ಆಗ ಅಗ್ರಿಮೆಂಟ್ ಬರೆದು ಕೊಡಬೇಕಾಗುತ್ತದೆ, ಮತ್ತೆ ಟೆಂಡರಿಗೆ ದುಡ್ಡು ಕಟ್ಟಬೇಕಾಗುತ್ತದೆ, ಮತ್ತೆ ರಸ್ತೆಗಳು ಏನಾದರೂ ಇಷ್ಟು ವರ್ಷವೆಂದು ಇರುತ್ತದೆ, ಆ ಸಮಯದಲ್ಲಿ ದುರಸ್ತಿ ಮಾಡಬೇಕಾದಂತಹ ಸಂದರ್ಭ ಬಂದರೆ ಮಾಡಿಕೊಡಬೇಕಾಗುತ್ತದೆ. ಅದೇ ಪೀಸ್ ವರ್ಕ್ ಎಂದು ಆದರೆ ಯಾವ ಕಂಡೀಷನ್ಸ್ ಇರುವುದಿಲ್ಲ, ಮತ್ತೆ ಟೆಂಡರಿಗೆ ದುಡ್ಡು ಕಟ್ಟಬೇಕಾಗಿರುವುದಿಲ್ಲ. ನಮ್ಮ ಮಿತ್ರರು ಈಗ ಹೇಳಿದಂತೆ ಒಂದು ರಸ್ತೆಗೆ ನಲವತ್ತು ಲಕ್ಷ ರೂಪಾಯಿಗಳ ಎಸ್ಟಿಮೇಟ್ ಇದ್ದರೆ ಐದು ಎಸ್ಟಿಮೇಟ್‌ಗಳನ್ನು ಮಾಡುತ್ತಾರೆ, ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಹೇಳಿದ ಹಾಗೆ 44ಲಕ್ಷ 99 ಸಾವಿರ ರೂಪಾಯಿಗಳೆಂದು ಮಾಡಿ ಎಲ್ಲವನ್ನೂ ಹಾಳು ಮಾಡಿದ ಹಾಗೆ ಆಗುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೇ, ಆ ರೀತಿ ವ್ಯವಸ್ಥೆ ಮಾಡುವುದಕ್ಕೆ ಅವಕಾಶ ಇಲ್ಲ. ಈಗ 30 ಲಕ್ಷ ರೂಪಾಯಿಗಳ ಕೆಲಸವನ್ನು ಐದು ಐದು ಲಕ್ಷ ಸ್ಪಿಲ್ ಮಾಡಿ ಆರು ಮಾಡುವುದಕ್ಕೆ ಆಗುವುದಿಲ್ಲ. It is impossible.

ಶ್ರೀ ಪಿ.ಕೃಷ್ಣಪ್ಪ: ಈ ರೀತಿ ಒಂದು ರಸ್ತೆಯನ್ನು ನಾಲ್ಕು ಭಾಗವಾಗಿ ಮಾಡಿಕೊಂಡಿರುವ ಮಾಹಿತಿಯನ್ನು ತಮಗೆ ತಂದು ತೋರಿಸುತ್ತೇವೆ, ಆಗ ಇದನ್ನು ನೀವು ವಾಪಸ್ಸು ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ಆಯಿತು, ನೀವು ಸಲಹೆಗಳನ್ನು ಕೊಡಿ, ಸರ್ಕಾರ ಅದರ ಬಗ್ಗೆ ಯೋಚಿಸುತ್ತದೆ.

ಶ್ರೀ ಪಿ.ಕೃಷ್ಣಪ್ಪ: ತಾವು ಈ ಬಿಲ್ ತರುವುದರಿಂದ ಸರ್ಕಾರಕ್ಕೆ ಆಗಲೀ, ಸಾರ್ವಜನಿಕರಿಗಾಗಲೀ ಒಳ್ಳೆಯದಲ್ಲವೆಂದು ಹೇಳುತ್ತೇನೆ.

+ ಶ್ರೀ ಹೆಚ್.ಎಸ್.ಮಹದೇವಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ಪಾರದರ್ಶಕ ಆ್ಯಕ್ಟ್ ತಂದಿರುವಂತಹ ಉದ್ದೇಶವೇನೆಂದರೆ, ಈ ಗುತ್ತಿಗೆದಾರರನ್ನು ಹಿಡಿತದಲ್ಲಿಡುವ ಉದ್ದೇಶದಿಂದಲೇ ಇದನ್ನು ಹಿಂದೆ ತಂದಿದ್ದಾರೆಂದು ನಾನು ಭಾವಿಸಿದ್ದೇನೆ. ಆದರೆ ಈ ಫೀಸ್ ವರ್ಕ್ ಕೊಡುವಂಥಾದ್ದನ್ನು ಐದು ಲಕ್ಷ ರೂಪಾಯಿಗಳಿಗೆ ಏರಿಸಿರುವಂಥಾದ್ದು ಈ ಆ್ಯಕ್ಟ್‌ನ ಮೂಲ ಉದ್ದೇಶವೇ ಡಿಫೀಟ್ ಆದ ಹಾಗೆ ಆಗಿದೆ. ಇದರ ಅವಶ್ಯಕತೆಯೇ ಇರಲಿಲ್ಲ. ತಾವು ಐದು ಲಕ್ಷ ರೂಪಾಯಿಗಳಿಗೆ ಕೊಡುವುದಾಗಿದ್ದರೆ ಈ ಪಾರದರ್ಶಕ ಆ್ಯಕ್ಟ್ ಮೂಲಕ ಸುಧಾರಣೆ ಮಾಡುತ್ತಿದ್ದೇವೆಂದು ಹೇಳುವಂತಹ ಅವಶ್ಯಕತೆಯೇ ಬರುತ್ತಾ ಇರಲಿಲ್ಲ. ಆದುದರಿಂದ ತಾವು ಈಗ ಒಂದು ಲಕ್ಷದಿಂದ ಐದು ಲಕ್ಷ ರೂಪಾಯಿಗಳಿಗೆ ಏರಿಸುವಂಥಾದ್ದು ಸೂಕ್ತವಲ್ಲ. ಈಗ ಆರು ತಿಂಗಳುಗಳಿಂದ ಈ ಆ್ಯಕ್ಟ್ ಬರುತ್ತಿದೆ ಎಂದು ನಮ್ಮ ಕ್ಷೇತ್ರಗಳಲ್ಲಿ ಯಾವುದೇ ಕಾಮಗಾರಿಗಳು ನಡೆಯುತ್ತಿಲ್ಲ. ಸರ್ಕಾರ ಐದು ಲಕ್ಷ ರೂಪಾಯಿಗಳಿಗೆ ಮಂಜೂರಾತಿಯನ್ನು ಕೊಡುತ್ತದೆ. ಈ ಕಾಯಿದೆ ಬರುತ್ತಿದೆ ಎಂದು ಆರು ತಿಂಗಳಿಂದ ಯಾವುದೇ ಕಾಮಗಾರಿಗಳು ನಮ್ಮ ಕ್ಷೇತ್ರದಲ್ಲಿ ನಡೆಯುತ್ತಿಲ್ಲ, ಎಕ್ಸಿಕ್ಯೂಟಿವ್ ಇಂಜಿನಿಯರ್ ಯಾವುದೇ ಟೆಂಡರ್ ಅನ್ನು ಅಂತಿಮಗೊಳಿಸದೆ ಆರು ತಿಂಗಳಿಂದ ಹಾಗೆ ಇಟ್ಟುಕೊಂಡಿದ್ದಾರೆ. ಈಗ ತಂದಿರುವುದನ್ನು ಜಾರಿಗೆ ತಂದರೆ ಗುತ್ತಿಗೆದಾರರಿಗೆ, ಇಂಜಿನಿಯರ್‌ಗಳಿಗೆ ಸರಾಗವಾಗಿ ಹಣ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗುತ್ತದೆಯೇ ಹೊರತು, ಈ ಕಾಯಿದೆಯಿಂದ ಯಾವುದೇ ಉಪಯೋಗವಾಗುವುದಿಲ್ಲ. ಆದುದರಿಂದ ಈಗ ಇರುವುದನ್ನೆ ಮುಂದುವರೆಸಿದರೆ ಸರ್ಕಾರಕ್ಕೆ ಹಾಗೂ ಜನರಿಗೆ ಕ್ಷೇಮವೆಂದು ನಾನು ಹೇಳಬಯಸುತ್ತೇನೆ.

ಶ್ರೀ ಎ.ರಾಮದಾಸ್(ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಬಂದಾಗ ಎಲ್ಲರೂ ಕೂಡ ಸ್ವಾಗತ ಮಾಡಿದವು, ಆದರೆ ಇಷ್ಟು ಬೇಗ ಆಪರೇಷನ್ ಆಗುತ್ತದೆಂದು ನಾವು ತಿಳಿದುಕೊಂಡಿರಲಿಲ್ಲ, ನಾವು ಸರ್ಜರಿ ಆಗುತ್ತದೆ ಎಂದು ಅಂದುಕೊಂಡಿರಲಿಲ್ಲ. ಏನಾದರೋ ಅಲ್ಲಿ ಇಲ್ಲಿ ಆದಂತಹ ಸಂದರ್ಭದಲ್ಲಿ ಮೆಡಿಸನ್ ಏನಾದರೂ ಕೊಡಬಹುದು ಎಂದು ನಾವು ಲೆಕ್ಕ ಹಾಕಿದ್ದೆವು. ಆದರೆ ಸರ್ಜರಿ ಮಾಡಿ ಆ ಬಿಲ್ಲಿನ ಉದ್ದೇಶವನ್ನೇ ಹಾಳು ಮಾಡುವಂಥ ವ್ಯವಸ್ಥೆ ಆಯಿತು. ಕಂಟಿನ್ಯೂಯೆಸ್ ವರ್ಕ್ಸ್‌ನ್ನು ಸ್ಪ್ಲಿಟ್ ಮಾಡಲು ಸಾಧ್ಯವಿಲ್ಲವೆಂದು ಮಾನ್ಯ ಕೈಗಾರಿಕಾ ಸಚಿವರು ಹೇಳಿದರು. ಹಾಗೆಂದು ಪ್ರಾವಿಷನ್ ಎಲ್ಲಿದೆ? ಇವತ್ತು ಇರುವ ಫೀಸ್ ರೇಟ್ ಎಂದು ಮಾಡುತ್ತಿದ್ದಿದ್ದೇ ಆ ಉದ್ದೇಶಕ್ಕೋಸ್ಕರ. ಯಾವುದೇ ಒಂದು ಕೆಲಸ ಕೊಡಬೇಕಾದರೂ ಪ್ಯಾಕೇಜ್ ಟೆಂಡರ್ ಎಂದು ತಂದವರೂ ಕೂಡ ನೀವೆ, ಒಳ್ಳೆಯ ಕ್ವಾಲಿಟಿ ಕೊಡುತ್ತಿದ್ದೇವೆ, ವಾರಂಟಿ ಪೀರಿಯಡ್ ಇರುತ್ತದೆ, ಅವರಿಗೆ ಮೈಂಟೆನೆನ್ಸ್ ಇರುತ್ತದೆಂದು ಎಲ್ಲಾ ವಿಚಾರಗಳನ್ನು ಹೇಳಿದವರು ನಿಮಗೆ ಕೇವಲ ಒಂದು

ವರ್ಷದೊಳಗೆ ತಿದ್ದುಪಡಿ ತರಬೇಕೆಂದು ಜ್ಞಾನೋದಯವಾಯಿತೆ? ಈ ತಿದ್ದುಪಡಿ ತರುವ ಬದಲಾಗಿ ಹಳೆಯ ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಂಡರೆ, ಅದು ಮುಗಿಯಿತು. ಮಾನ್ಯ ಸದಸ್ಯರಾದ ಮಹಾದೇವಪ್ರಸಾದ್‌ರವರು ಹೇಳಿರುವುದು ಎಲ್ಲಾ ಕಡೆಯೂ ಇದೆ. ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿರುವ ಡೆವಲಪ್‌ಮೆಂಟ್ ಅಥಾರಿಟಿಗಳಲ್ಲೂ ಕೂಡ ಇವತ್ತು ಒಂದು ಲಕ್ಷಕ್ಕಿಂತ ಹೆಚ್ಚಿಗೆ ಕೂಡಲಾಗುವುದಿಲ್ಲವೆಂದು, ಟೆಂಡರ್‌ನಲ್ಲಿ ಭಾಗವಹಿಸಬೇಕೆಂದು ಕಂಟ್ರಾಕ್ಟರ್ಸ್ ಬಹಳ ಒತ್ತಡ ಮಾಡುತ್ತಿದ್ದು, ಅದು ವಿಧಾನ ಸಭೆಯವರೆಗೆ ಬರುವಷ್ಟು ಕೆಲಸ ಮಾಡಿದೆ ಎಂದು ಈಗ ನನಗನ್ನಿಸುತ್ತಿದೆ. ತಾವು ಹಳೆಯ ವಿಧೇಯಕವನ್ನು ತರುವಾಗ ಏನೇನು ಹೇಳಿದ್ದೀರೆಂಬುದೆಲ್ಲಾ ಕಡತದಲ್ಲಿದೆ. ಕಾಮಗಾರಿ ಕೆಲಸಗಳು ಚೆನ್ನಾಗಿ ಆಗುವ ದೃಷ್ಟಿಯಿಂದ, ಹಳೆಯ ವಿಧೇಯಕವನ್ನು ಮುಂದುವರೆಸಿಕೊಂಡು ಹೋಗುವುದು ಒಳ್ಳೆಯದು, ದಯಮಾಡಿ ಈ ತಿದ್ದುಪಡಿ ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಕಂಟಿನ್ಯೂಯೆಸ್ ವರ್ಕ್ ಅನ್ನು ಈ ರೀತಿ ಸ್ಪ್ಲಿಟ್ ಮಾಡಿ ಐದೈದು ಲಕ್ಷಕ್ಕೆ ಕೊಡುವುದರ ವ್ಯವಸ್ಥೆ ಆಗುವುದಾದರೆ ಇದರ ಅವಶ್ಯಕತೆಯೇ ಇಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ನಾರಾಯಣ(ಬೆಳ್ಳಾವಿ): ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ನಾವು ಯಾವ ದೃಷ್ಟಿಯ ಮೇಲೆ ತಂದಿದ್ದೇವೆಯೋ ಅದರ ಸಾಧಕಬಾಧಕ ಅದನ್ನೇ ಅವಲಂಬಿಸಿರುತ್ತದೆ. ಟ್ರಾನ್ಸ್‌ಪರೆನ್ಸಿ ಆಕ್ಟ್ ತಂದಿರುವುದಕ್ಕೆ ಎಲ್ಲರೂ ಸ್ವಾಗತ ಮಾಡಿದ್ದಾರೆ, ಆದರೆ ಅದನ್ನು ಆಚರಣೆಗೆ ತರುವುದರಲ್ಲಿ ನಮ್ಮ ಅನುಭವದ ಮಾತನ್ನು ಹೇಳಬೇಕಾಗುತ್ತದೆ. ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ 100 ಲಕ್ಷ ರೂಪಾಯಿಗಳ ಯೋಜನೆ ಚೆನ್ನಾಗಿ ನಡೆಯುತ್ತಿದೆ. ಅದನ್ನು ಮುಂದುವರೆಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ಹಾಗೂ ಪಂಚಾಯತ್‌ರಾಜ್ ಮಂತ್ರಿಯವರಲ್ಲಿ ನಾವು ಕೇಳಿಕೊಂಡಿದ್ದೇವೆ. ಈ 100 ಲಕ್ಷ ರೂಪಾಯಿಗಳ ಯೋಜನೆಯಲ್ಲಿ ಟೆಂಡರ್ ಹಾಕಿದಂತಹ ಸಂದರ್ಭದಲ್ಲಿ ಒಬ್ಬನೇ ಟೆಂಡರ್‌ದಾರ ಇಡೀ ಜಿಲ್ಲೆಯಲ್ಲಿ 20-30 ಕಾಮಗಾರಿಗಳನ್ನು ತೆಗೆದುಕೊಂಡು ಎಲ್ಲೂ ಕೂಡ ಕಾಮಗಾರಿಯನ್ನು ಪ್ರಾರಂಭ ಮಾಡುವುದಿಲ್ಲ, ಇಷ್ಟು ದಿವಸಗಳಲ್ಲಿ ಕೆಲಸ ಪ್ರಾರಂಭ ಮಾಡಬೇಕೆಂದು ಕಾನೂನು ಇರುತ್ತದೆ. ಅದನ್ನು ಇಲಾಖೆಯಲ್ಲಿ ತೆಗೆದುಕೊಂಡು ಫೀಸ್ ವರ್ಕ್ ಮಾಡಿದರೆ ಎಲ್ಲರಿಗೂ ಹಂಚಿ ವಿಕೇಂದ್ರೀಕರಣ ಮಾಡಿದಂತಾಗುತ್ತದೆ, ಇಲ್ಲಿ ಅನಾರೋಗ್ಯಕರ ಸ್ಪರ್ಧೆ ಕಾಣುತ್ತಿದೆ, ಬಹುಶಃ ಇದು ಎಲ್ಲರಿಗೂ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ. ಟೆಂಡರ್‌ನಲ್ಲಿ ಪಾರದರ್ಶಕತೆ ಇದೆ ಎಂಬುದನ್ನು ನಾನು ಒಪ್ಪಲು ತಯಾರಿಲ್ಲ. ಇವತ್ತು ನಗರಸಭೆ, ಮುನಿಸಿಪಾಲಿಟಿ ಅಥವಾ ಬೇರೆಡೆಗಳಲ್ಲಿ ಅನಾರೋಗ್ಯಕರ ಸ್ಪರ್ಧೆಯಿಂದಾಗಿ ಎಲ್ಲಾ ಕಡೆ ಟೆಂಡರ್ ಕಾಮಗಾರಿಗಳನ್ನು ಕೊಂಡುಕೊಳ್ಳಬೇಕಾಗಿದೆ. ಎಲ್ಲರೂ ಟೆಂಡರ್

ಫಾರ್ಮ್ ತೆಗೆದುಕೊಂಡು ಹೋಗುತ್ತಾರೆ, ಟೆಂಡರ್ ಹಾಕುವುದಿಲ್ಲ, ಯಾರಿಗೆ ಟೆಂಡರ್ ಕೊಡಬೇಕೆನ್ನುವ ಒಂದು ಅಂಡರ್‌ಸ್ಟ್ಯಾಂಡಿಂಗ್‌ಗೆ ಬಂದು ಇವತ್ತು ಟೆಂಡರ್ ಎಂಬುದು ಅಲ್ಲಿ ಒಂದು ದೊಡ್ಡ ದಂಧೆಯಾಗಿದೆ. ಟೆಂಡರ್ ಅನ್ನು ನಿಲ್ಲಿಸಬೇಕೆಂದು ಹೇಳುತ್ತಿಲ್ಲ, ಇಂತಹ ವಾತಾವರಣದಲ್ಲಿ 5 ಲಕ್ಷದವರೆಗೆ ಪೀಸ್ ವರ್ಕ್ ಆಗಿ ಕೊಡುವುದು ಕಾಮಗಾರಿಗಳ ದೃಷ್ಟಿಯಿಂದ ತುಂಬಾ ಅರ್ಥಪೂರ್ಣವಾದದ್ದು, ಅದನ್ನು ಎಲ್ಲರೂ ಒಪ್ಪುತ್ತಾರೆ. ರಾಜಕೀಯ ಕಾರಣಕ್ಕೋಸ್ಕರ ಟೀಕೆ ಮಾಡಬಹುದು. ಎರಡನೆಯದಾಗಿ, ಕಿರುನೀರು ಸರಬರಾಜಿಗೆ ಎರಡು ಲಕ್ಷ ರೂ.ಗಳನ್ನು ಇಟ್ಟಿದ್ದಾರೆ, ಅದನ್ನು ದಯವಿಟ್ಟು 3 ಲಕ್ಷಕ್ಕೆ ಏರಿಸಬೇಕು, ಜೊತೆಗೆ ಶಾಲಾ ಕೊಠಡಿಗಳ ಜೊತೆಗೆ ಅಂಗನವಾಡಿ ಕಟ್ಟಡಗಳನ್ನು ಸೇರಿಸಬೇಕು. ನನ್ನ ಕ್ಷೇತ್ರದಲ್ಲಿ ಕಿರುನೀರು ಸರಬರಾಜಿಗೆ ಒಬ್ಬನೇ ಮೂರಕ್ಕೆ ಟೆಂಡರ್ ಹಾಕಿಕೊಂಡ, ಆತ ಕೆಲಸ ಪ್ರಾರಂಭ ಮಾಡಲು ಬರಲಿಲ್ಲ, ಅಲ್ಲಿ ಏನಾಗಿದೆ ಎಂದರೆ ಮೋಟಾರ್ ಅವನೇ ತರಬೇಕು, ಪೈಪ್ ಅವನೇ ತರಬೇಕು, ಕ್ವಾಲಿಟಿ ಎನ್‌ಶೂರ್ ಮಾಡಲು ಆಗುವುದಿಲ್ಲ. ಮಾನಿಟರ್ ಮಾಡುವುದಕ್ಕಾಗುವುದಿಲ್ಲ. ಎರಡಲ್ಲೂ ನ್ಯೂನ್ಯತೆಗಳಿವೆ. ನಾವು ಇಲ್ಲ ಎನ್ನುವುದಕ್ಕೆ ಆಗುವುದಿಲ್ಲ. ಆದರೆ ಈ ತಿದ್ದುಪಡಿ ವಿಧೇಯಕವನ್ನು ಸದುದ್ದೇಶದಿಂದ ತಂದಿರುವುದು, ನಮಗೆ ಕಾಮಗಾರಿ ತ್ವರಿತವಾಗಿ ಆಗಬೇಕಾಗಿದೆ. ಗುಣಮಟ್ಟ ಕಾಪಾಡಲು ಬೇರೆ ಮಾರ್ಗಗಳಿವೆ, ಇಂಜಿನಿಯರ್ ಮೇಲೆ ರೆಸ್ಪಾನ್ಸಿಬಿಲಿಟಿ ಇದೆ. ಅಕೌಂಟಬಿಲಿಟಿ ಇದೆ. ಯಾವ್ಯಾವ ಸಂಸ್ಥೆಗಳು ಕೆಲಸವನ್ನು ಮಾಡಿಸುತ್ತವೆಯೋ ಅವು ಮಾನಿಟರ್ ಮಾಡುವ ಮೂಲಕ ಕ್ವಾಲಿಟಿ ಎನ್‌ಷೂರ್ ಮಾಡುವ ಮೂಲಕ ಮಾಡಬೇಕಾಗುತ್ತದೆ. ಟೆಂಡರ್‌ನಲ್ಲಿ ಭ್ರಷ್ಟಾಚಾರ ಇಲ್ಲವೆ? ಅಲ್ಲಿ ಏನೂ ನಡೆಯುವುದಿಲ್ಲವೇ? ಆದುದರಿಂದ ಈಗ ತಂದಿರುವುದು ಸ್ವಾಗತಾರ್ಹವಾಗಿದೆ. ಕಿರುನೀರು ಯೋಜನೆಯಡಿ 2 ಲಕ್ಷ ರೂ. ಇರುವುದನ್ನು 3 ಲಕ್ಷ ರೂ.ಗಳೆಂದು ಮಾಡುವುದಕ್ಕೆ ಹಾಗೂ ಶಾಲಾ ಕಟ್ಟಡವೆಂಬ ಕಡೆ ಅಂಗನವಾಡಿ ಕಟ್ಟಡವೆಂಬುದನ್ನು ಕೂಡ ಸೇರಿಸಬೇಕು ಎಂದು ಹೇಳಿ ಈ ತಿದ್ದುಪಡಿಯನ್ನು ಸ್ವಾಗತ ಮಾಡಿ ಇದನ್ನು ಸರ್ವಾನುಮತದಿಂದ ಪಾಸ್ ಮಾಡಬೇಕೆಂದು ಒಬ್ಬ ಶಾಸಕನಾಗಿ ತಮ್ಮ ಮೂಲಕ ಎಲ್ಲಾ ಮಾನ್ಯ ಸದಸ್ಯರಲ್ಲೂ ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಬಿ.ಮಲ್ಲಿಕಾರ್ಜುನ(ಬಿರೂರು): ಮಾನ್ಯ ಸಭಾಧ್ಯಕ್ಷರೇ, ಕಳೆದ ಎಂಟು ತಿಂಗಳ ಹಿಂದೆ ಈ ಮಸೂದೆಗೆ ಎರಡು ಸದನಗಳಲ್ಲೂ ಒಪ್ಪಿಗೆ ಸಿಕ್ಕಿ ವಿಧೇಯಕವಾಯಿತು, ಈ ಅವಧಿಯಲ್ಲಿ ಸರ್ಕಾರ ಏನು ಅಂತಹ ಮಹತ್ತರವಾದ ಬದಲಾವಣೆಯನ್ನು ಕಂಡಿತೆಂಬುದನ್ನು ಸರ್ಕಾರ ಸದನಕ್ಕೆ ಹೇಳಬೇಕಾಗುತ್ತದೆ. ಮೊದಲು ವಿಧೇಯಕವನ್ನು ತರಬೇಕಾದರೆ ಯೋಚನೆ ಮಾಡಿ ತಂದಿರುತ್ತಾರೆ. ಈಗ ತಂದಿರುವ ತಿದ್ದುಪಡಿ ವಿಧೇಯಕದಲ್ಲಿ ಉದ್ದೇಶ ಹಾಗೂ ಕಾರಣಗಳನ್ನು ಹೇಳಲಾಗಿದೆ. ಅದೇನೆಂದರೆ ದರಗಳಲ್ಲಿನ ಏರಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ತರಲಾಗಿದೆ ಎಂದು

ಹೇಳಲಾಗಿದೆ. ಶೇಕಡ 200ರಷ್ಟು ದರ ಏರಿಕೆಯಾಗಿದೆಯೇ ಎಂಬುದನ್ನು ಸರ್ಕಾರ ಹೇಳಬೇಕು. ಒಂದು ಲಕ್ಷವಿದ್ದರೆ ಒಂದು ಲಕ್ಷ ಹತ್ತು ಸಾವಿರ ಮಾಡುವುದು ಸರಿ, ಒಂದು ಲಕ್ಷವನ್ನು ಐದು ಲಕ್ಷ ಮಾಡುವಷ್ಟು ಐದು ಪಟ್ಟು ದರ ಏರಿಕೆಯಾಗಿದೆಯೇ? ಕಾರಣ ಕೊಡುವುದರಲ್ಲಿಯೂ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು, ಆದುದರಿಂದ ಈ ಏಧೇಯಕ ಸಮಂಜಸವಾಗಿಲ್ಲವೆಂದು ನಾನು ಹೇಳುತ್ತೇನೆ. ಎರಡನೆಯದಾಗಿ ಈ ಉಸಿರುಗಟ್ಟುವಂತಹ ವಾತಾವರಣ ಏತಕ್ಕೆ ನಿರ್ಮಾಣವಾಯಿತು? ನಮ್ಮ ಸ್ನೇಹಿತರು ಕಾಮಗಾರಿ ಕೆಲಸಗಳು ತಡವಾಗುತ್ತದೆಂದು ಹೇಳಿದರು. ಕಾಮಗಾರಿ ಕೆಲಸಗಳು ನಿಧಾನವಾಗಿರುವುದು ಕಳೆದ ಮೂರು ತಿಂಗಳಿಂದೀಚೆಗೆ, ಎಲ್ಲಾ ಜಿಲ್ಲಾ ಸಚಿವರು ಮೌಖಿಕವಾದ ಆದೇಶವನ್ನು ಕೊಟ್ಟಿದ್ದಾರೆ, ನಾನು ಸಾಬೀತು ಮಾಡುತ್ತೇನೆ. ಕೆಲವು ಕಡೆಬಿ ಸಭೆಗಳಲ್ಲಿ ಒಂದು ಲಕ್ಷದಿಂದ ಐದು ಲಕ್ಷಕ್ಕೆ ಏರುತ್ತದೆ ಮೂರು ತಿಂಗಳು ತಡೆದುಕೊಳ್ಳಿ ಎಂದು ಮೌಖಿಕ ಆದೇಶ ಕೊಟ್ಟಿರುವುದರಿಂದ ಕೆಲಸಗಳು ಸ್ಥಗಿತವಾಗಿದೆಯೇ ಹೊರತು ಟೆಂಡರಿಗೋಸ್ಕರ ನಿಂತಿಲ್ಲ. ಸರಿಯಾಗಿ ಟೆಂಡರ್ ಕರೆದಿದ್ದರೆ ಇಷ್ಟು ಹೊತ್ತಿಗೆ ಕೆಲಸಗಳು ಮುಗಿಯುತ್ತಿದ್ದವು, ಮೌಖಿಕ ಆದೇಶವನ್ನು ಕೊಟ್ಟಿರುವುದರಿಂದ ಕೆಲಸಗಳು ನಿಧಾನವಾಗಿದೆ. ಇದನ್ನು ತರಲು ಮತ್ತೊಂದು ಕಾರಣ ಏನೆಂದರೆ, ನಮ್ಮ ಜಿಲ್ಲಾ ಪರಿಷತ್ ಫಂಡ್ ತಾಲ್ಲೂಕು, ಗ್ರಾಮ ಪಂಚಾಯಿತಿ ಫಂಡ್‌ಗಳನ್ನು ಆಯಾ ಪಂಚಾಯಿತಿಯ ಸದಸ್ಯರು ಹೇಳಿದವರಿಗೆ ಕೊಡಬೇಕೆನ್ನುವ ಒತ್ತಡವನ್ನು ತರುತ್ತಿದ್ದಾರೆ. ಅವೆಲ್ಲವೂ ಕೂಡ ಒಂದು ಲಕ್ಷ ರೂಪಾಯಿಗಳಿಗೂ ಮೀರುತ್ತವೆ, ಅವರು ಹೇಳಿದವರಿಗೆ ಕೊಡುವುದಕ್ಕಾಗುವುದಿಲ್ಲ. ಅವರೇ ಕಂಟ್ರಾಕ್ಟ್ ಮಾಡಬೇಕೆನ್ನುವ ದೃಷ್ಟಿಯಿಂದ ಸರ್ಕಾರದ ಮೇಲೆ ಪೂರ್ಣ ಪ್ರಮಾಣದ ಒತ್ತಡವನ್ನು ತಂದಿದ್ದಾರೆಂದು ಸರ್ಕಾರದ ಗಮನಕ್ಕೆ ತರುತ್ತೇನೆ. ಕಳಪೆ ಕಾಮಗಾರಿಗಳಾಗಲು ಪೂರಕವಾಗುವ ಈ ಏಧೇಯಕವನ್ನು ಇಲ್ಲಿ ಮಂಡಿಸಿರುವುದು ಈ ರಾಜ್ಯದ ಜನತೆಗೆ ಮಾಡಿರುವ ದೊಡ್ಡ ದ್ರೋಹ, ಇದರಿಂದ ಬಹಳಷ್ಟು ಅನ್ಯಾಯವಾಗುತ್ತದೆ. ಈ ಒಂದು ಏಧೇಯಕವನ್ನು ಕಳೆದ ಸಾರಿ ಪಾಸ್ ಮಾಡಿಕೊಳ್ಳಬೇಕಾದರೆ ಏನೇನು ಚರ್ಚೆ ಇಲ್ಲಿ ಆಗಿದೆ ಎಂಬುದನ್ನು ಕಡತ ತೆಗೆದು ನೋಡಿದೆ, ಅದನ್ನು ಹೇಳಿದರೆ ಸದನದಲ್ಲಿ ಗೊಂದಲವಾಗುತ್ತದೆ.

4.00 ಪಿ.ಎಂ.

ಏನೇನು ಹೇಳಿದರು, ಎಷ್ಟು ಪಾರದರ್ಶಕತೆ ಇರುತ್ತದೆ, ಯಾವ ರೀತಿ ಕೆಲಸ ಮಾಡುತ್ತೇವೆಂದರೆ ಮುಂದಿನ ಐದು ವರ್ಷಗಳಲ್ಲಿ ಒಂದೇ ಒಂದು ಗುಂಡು ಸೂಜಿಯನ್ನೂ ಸಹಿತ ಅಕ್ರಮವಾಗಿ ಕೊಳ್ಳಲಿಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಇಲ್ಲಿ ಹೇಳಿದ ಮೂರು ತಿಂಗಳು ಕಳೆಯುತ್ತಿದ್ದಂತೆಯೇ ಈ ಒಂದು ಏಧೇಯಕವನ್ನು ತಂದರೆ ಇದು ಯಾವ ನ್ಯಾಯ ಎನ್ನುವುದರ ಬಗ್ಗೆ ತಾವು ಜಸ್ಟಿಫಿಕೇಷನ್ ಕೊಡಬೇಕಾಗುತ್ತದೆ.

ಆದ್ದರಿಂದ ಸರ್ಕಾರ ಬಹಳ ವಿವೇಚನೆಯನ್ನು ಉಪಯೋಗಿಸಿ ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇದು ಉದ್ಧಟತನದ್ದು ಎಂದು ಹೇಳುವುದು ಬೇಡ. ವಿಧೇಯಕವನ್ನು ವಾಪಸ್ಸು ತೆಗೆದುಕೊಂಡು ಸರ್ಕಾರದ ಮರ್ಯಾದೆಯನ್ನು ಉಳಿಸಿಕೊಳ್ಳಬೇಕೆನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಮೇಲೆ ಬಹಳಷ್ಟು ಸದಸ್ಯರು ಸಾಕಷ್ಟು ಮಾತನಾಡಿದ್ದಾರೆ. ನಾವು ಪಾರದರ್ಶಕತೆಯಿಂದ ಆಡಳಿತವನ್ನು ಕೊಡುತ್ತೇವೆಂದು ಘೋಷಣೆ ಮಾಡಿ ಈಗ ಅದಕ್ಕೆ ಡೀವಿಯೇಷನ್ ಆಗುವಂಥಾದ್ದನ್ನು ನೋಡಿದರೆ ಬಹುಶಃ ಪಾರದರ್ಶಕತೆ ಎನ್ನುವುದು ಕೇವಲ ಬೂಟಾಟಿಕೆಯ ಮಾತು ಎಂದೆನಿಸುತ್ತದೆ. ಕಳೆದ ಒಂದೂವರೆ ವರ್ಷದಿಂದ ಪಾರದರ್ಶಕತೆ ರೀತಿಯಲ್ಲಿ ಸರ್ಕಾರದ ಆಡಳಿತ ನಡೆಯುತ್ತಿಲ್ಲ. ಈ ವಿಧೇಯಕದಲ್ಲಿ ಟೆಂಡರ್ ಕರೆಯದೆ ಒಂದು ಲಕ್ಷ ರೂಪಾಯಿಗಳವರೆಗೆ ಕೆಲಸ ಮಾಡಿಸಬಹುದೆಂದು ಇದ್ದುದನ್ನು ಈಗ 5 ಲಕ್ಷ ರೂಪಾಯಿಗಳಿಗೆ ಏರಿಸಿರುವುದು ಸರಿಯಲ್ಲ. ಟೆಂಡರ್ ಕರೆದು ಕೆಲಸ ಮಾಡಿಸುವುದಕ್ಕೆ ಡಿಲೇ ಆಗುತ್ತದೆ, ಅದಕ್ಕೋಸ್ಕರ ಟೆಂಡರ್ ಕರೆಯದೆ 5 ಲಕ್ಷ ರೂ. ತನಕ ಕೆಲಸ ಮಾಡಿಸಬಹುದೆಂದು ಹೇಳುತ್ತೀರಿ. ಸರಿಯಾಗಿ ಟೆಂಡರ್ ಕರೆದು ಕೆಲಸ ಮಾಡಿಸಿದರೆ ಡಿಲೇ ಎನ್ನುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಇಲ್ಲಿ ಕೇವಲ ಡಿಲೇ ಎನ್ನುವ ನೆವ ಹೇಳುತ್ತಿದ್ದಾರೆ. ವಿಧೇಯಕವನ್ನು ತಂದಿರುವುದರಲ್ಲಿ ಸಾರ್ವಜನಿಕರ ಹಿತಾಸಕ್ತಿ ಇಲ್ಲ. ಅಲ್ಲಿ ಯಾರು ಇಂಜಿನಿಯರ್ಸ್ ಇದ್ದಾರೆ, ಸಂಬಂಧಪಟ್ಟ ಕಂಟ್ರಾಕ್ಟರ್ಸ್ ಇರುತ್ತಾರೆ ಅವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಮಾಡುತ್ತಿದ್ದೀರಿ. ಆದ್ದರಿಂದ ಪಾರದರ್ಶಕತೆ ಸರ್ಕಾರ ಎಂದು ಹೇಳಿ ಜನರಿಗೆ ಆಕರ್ಷಣೆ ಹುಟ್ಟಿಸಿ, ಅವರಿಗೆ ಮರಳು ಮಾಡಿದ್ದು ಈಗ ಸರ್ಕಾರದ ನಿಜವಾದ ಬಣ್ಣ ಏನಿದೆ ಅದು ಹೊರಕ್ಕೆ ಬರುತ್ತಿದೆ. ಆದ್ದರಿಂದ ಸಾರ್ವಜನಿಕರ ಹಿತಾಸಕ್ತಿಯನ್ನು ಇಟ್ಟುಕೊಂಡು ಶಾಸಕರುಗಳ ಅಭಿಪ್ರಾಯಗಳಿಗೆ ಮಾನ್ಯ ಸಚಿವರು ಸ್ಪಂದಿಸಿ ಈ ಬಿಲ್ಲನ್ನು ಏತ್‌ಡ್ರಾ ಮಾಡಬೇಕೆಂಬ ಒತ್ತಾಯ ಮಾಡುತ್ತೇನೆ. ಬಹುಶಃ ತಾವು ಈ ರೀತಿಯ ನಿರ್ಣಯ ಕೈಗೊಳ್ಳುತ್ತೀರೆಂದು ಭಾವಿಸಿದ್ದೇನೆ. ಏಕೆಂದರೆ ಸರ್ಕಾರ ಹೊಸದಾಗಿ ಆಡಳಿತಕ್ಕೆ ಬಂದಾಗ ಜನರಿಗೆ ಏನು ವಚನ ಕೊಟ್ಟಿದ್ದೀರಿ ಅದಕ್ಕನುಗುಣವಾಗಿ ಈ ಬಿಲ್ಲನ್ನು ಏತ್‌ಡ್ರಾ ಮಾಡಿಕೊಳ್ಳಿ. ಇಲ್ಲದಿದ್ದರೆ ಪಾರದರ್ಶಕ ಆಡಳಿತವನ್ನು ನಡೆಸುತ್ತೇವೆಂದು ನುಡಿದಂಥ ನಿಮ್ಮ ಘೋಷಣೆಗೆ ಯಾವುದೇ ಅರ್ಥ ಉಳಿಯುವುದಿಲ್ಲ. ದಯಮಾಡಿ ಈ ವಿಧೇಯಕವನ್ನು ವಾಪಸ್ಸು ಪಡೆದುಕೊಳ್ಳಿ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷನಾಗಿ ಒಂದು ವರ್ಷ ಕೆಲಸ ಮಾಡಿದ್ದೇನೆ. ಮೇಜರ್

ಇರಿಗೇಷನ್‌ನಲ್ಲಿ ಎಲ್ಲೆಲ್ಲಿ ಕೆಲಸ ಆಗಿದೆ ಎನ್ನುವ ಬಗ್ಗೆ ಇನ್ಸ್‌ಪೆಕ್ಷನ್ ಹೋಗಿ ನೋಡಿದಾಗ ತುಂಡು ಗುತ್ತಿಗೆ ಕೊಟ್ಟು ಏನೇನು ಲೂಟ ಮಾಡಬಹುದೋ ಅದೆಲ್ಲವನ್ನೂ ಕೂಡ ಲೂಟ ಮಾಡಿದ್ದಾರೆ. ನಾವು ಕಳೆದ ಸಾರಿ ಮಾನ್ಯ ಮುಖ್ಯಮಂತ್ರಿಗಳನ್ನು ಇದರ ಬಗ್ಗೆ ಕೇಳಿದಾಗ ಎಲ್ಲೋ ಒಂದು ಕಡೆ ಇದಕ್ಕೆ ಪಾರದರ್ಶಕತೆಯನ್ನು ತಂದು ಎಲ್ಲವನ್ನೂ ಸರಿಮಾಡುತ್ತೇವೆಂದು ಹೇಳಿದಾಗ ಇಡೀ ರಾಜ್ಯದ ಜನ ಒಂದು ಸಾರಿ ನಿಟ್ಟುಸಿರು ಬಿಟ್ಟರು. ಏನಾದರೂ ಆಗಲಿ, ಇಷ್ಟು ವರ್ಷ ಆಡಳಿತಕ್ಕೆ ಬಂದಂಥ ಸರ್ಕಾರಗಳು ಮಾಡುವುದಕ್ಕೆ ಆಗದಿರುವಂಥ ಕೆಲಸವನ್ನು ಈ ಸರ್ಕಾರದ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆನ್ನುವ ಬಹಳ ದೊಡ್ಡ ಮೆಸೇಜ್ ಜನರಿಗೆ ಹೋಗಿತ್ತು. ಆದರೆ ಈಗ ಈ ಏಧೇಯಕವನ್ನು ತಂದಿರುವುದನ್ನು ನೋಡಿದರೆ ಪಾರದರ್ಶಕತೆ ಎನ್ನುವುದು ಪ್ರಶ್ನೆಯಾಗಿಯೇ ಉಳಿದಿದೆ. ಕೆಲಸ ಮಾಡದೆ ಹಣದ ಲೂಟ್ ಮಾಡುವುದಕ್ಕೆ ಇದರ ಹಿಂದೆ ಒಂದು ಭ್ರಷ್ಟ ಜಾಲವೇ ಇದೆ. ಚುನಾವಣೆಗೆ ಅಭ್ಯರ್ಥಿಗಳು ನಿಂತಾಗ ಕೆಲವು ಕಾರ್ಯಕರ್ತರು ಆ ಅಭ್ಯರ್ಥಿ ಗೆದ್ದು ಬಂದರೆ ಅವರ ಮುಖಾಂತರ ಕಂಟ್ರಾಕ್ಟ್ ಕೆಲಸ ಮಾಡಬೇಕೆಂದು ಅಭ್ಯರ್ಥಿ ಪರವಾಗಿ ಕೆಲಸ ಮಾಡಿರುತ್ತಾರೆ. ಕಂಟ್ರಾಕ್ಟ್ ಮಾಡಬೇಕೆನ್ನುವ ಉದ್ದೇಶದಿಂದಲೇ ಕೆಲವು ಚುನಾವಣೆಯಲ್ಲಿ ಕೆಲಸ ಮಾಡುತ್ತಾರೆ. ನಾವು ಗೆದ್ದು ಬಂದ ಕೂಡಲೇ ಅವರು ಮೊದಲನೇ ಬಾರಿಗೆ ಕೇಳುವುದೇ ನಮಗೆ ಕಂಟ್ರಾಕ್ಟ್ ಕೊಡಿ ಎಂದು. ಶಾಲೆ ಕಟ್ಟಡ ಕೆಲಸ ಇದೆ, ರಸ್ತೆ ಕೆಲಸ ಇದೆ ಅದನ್ನು ನಮಗೆ ಕಂಟ್ರಾಕ್ಟ್ ಕೊಡಿ, ನಮಗೆ ಕೊಡದೆ ಇನ್ಯಾರಿಗೆ ಕೊಡುತ್ತೀರಿ, ನೀವು ಗೆಲ್ಲುವುದಕ್ಕಾಗಿ ನಾವು ಹಗಲು ರಾತ್ರಿ ಕೆಲಸ ಮಾಡಿದ್ದೇವೆ, ನಮಗೆ ಏನು ಕೊಡುತ್ತೀರಿ ಎಂದು ಕೇಳುತ್ತಾರೆ. ಇದು ಉದ್ದೇಶಪೂರ್ವಕವಾಗಿ ನಮ್ಮ ಕಾರ್ಯಕರ್ತರನ್ನು ಸೃಷ್ಟಿಮಾಡಲಿಕ್ಕೆ, ನಮ್ಮ ಹಿಂದಿರುವ ಭ್ರಷ್ಟಾಚಾರ ಜಾಲವನ್ನು ತೃಪ್ತಿಪಡಿಸಲಿಕ್ಕೆ ಇರತಕ್ಕಂಥ ಒಂದು ಏಧಾನ. ತಮ್ಮ ಸರ್ಕಾರ ಪಾರದರ್ಶಕತೆ ಬಿಲ್ಲನ್ನು ತಂದಾಗ ಇವೆಲ್ಲವೂ ಹೋಗಬಹುದೆನ್ನುವ ಭಾವನೆ ಇಟ್ಟುಕೊಂಡಿದ್ದೆವು. ನಮ್ಮ ಹತ್ತಿರ ಟೆಂಡರ್ ಕೆಲಸ ಕೊಡಿಸಿ ಎಂದು ಯಾರಾದರೂ ಬಂದು ಕೇಳಿದರೆ, ನೋಡಿ ಸ್ವಾಮಿ, ಸರ್ಕಾರದ ನಿಯಮಾವಳಿ ಹೀಗಿದೆ, ನೀವು ಲೈಸೆನ್ಸ್ ಮಾಡಿಸಿಕೊಳ್ಳಿ, ಕಾನೂನಿನ ಪ್ರಕಾರ ಟೆಂಡರ್ ಹಾಕಿ, ನಿಮಗೆ ಅವಕಾಶ ಸಿಕ್ಕಿದರೆ ಕೆಲಸ ಮಾಡಿಸಿ ಎಂದು ಹೇಳುತ್ತಿದ್ದೆವು. ಬಹಳಷ್ಟು ಜನ ಇಂಜಿನಿಯರ್‌ಗಳಿಗೆ ಇದರಿಂದ ಲಾಭ ಉಣತಕ್ಕಂಥ, ಕೆಲಸ ಮಾಡದೆಯೇ ಬಿಲ್ ಕೊಟ್ಟು ದುಡ್ಡು ತಿನ್ನತಕ್ಕಂಥ ಕೆಲವು ಗುತ್ತಿಗೆದಾರರು ಇದ್ದಾರೆ, ಆ ಬಿಲ್‌ಗೆ ಸಿಗ್ನೇಚರ್ ಹಾಕಿಸುವುದಕ್ಕೋಸ್ಕರ ಕೆಲವು ಗುತ್ತಿಗೆದಾರರು ಇದ್ದಾರೆ, ಅವರಿಗೆ ಬಹಳ ಉಸಿರು ಕಟ್ಟುವಂಥ ಪರಿಸ್ಥಿತಿ ಇತ್ತು. ಆ ಹಿನ್ನೆಲೆಯಲ್ಲಿ ಇವತ್ತು ಈ ಬಿಲ್‌ನ್ನು ಸರ್ಕಾರ ತಂದಿದೆ. ಅವರ ಒತ್ತಡ ಜಾಸ್ತಿಯಾಗಿ ಆ ಒತ್ತಡವನ್ನು ತಡೆದುಕೊಳ್ಳಲಿಕ್ಕೆ ಆಗದಿರುವ ಪರಿಸ್ಥಿತಿ ಇವತ್ತು ನಿಮಗೆ ಬಂದಿದೆ. ಸರ್ಕಾರದ ಬೌದ್ಧಿಕ ದಿವಾಳಿತನವನ್ನು ಈ ಬಿಲ್ ಎತ್ತಿ ತೋರಿಸುತ್ತದೆ. ಈ ಬಿಲ್ಲನ್ನು

ಜಾರಿಗೆ ತಂದರೆ ಖಂಡಿತವಾಗಿ ಜನರು ನಿಮ್ಮನ್ನು ಕ್ಷಮಿಸುವುದಿಲ್ಲ. ಬಹಳಷ್ಟು ಜನ ಚಾರಿತ್ರವಂತರು, ಈ ದೇಶಕ್ಕೆ ಒಳ್ಳೆಯದಾಗಬೇಕು, ಸಾರ್ವಜನಿಕರ ಹಣ ಸದ್ವಿನಿಯೋಗ ಆಗಬೇಕೆಂದು ಯಾರೆಲ್ಲಾ ಯೋಚನೆ ಮಾಡುತ್ತಿದ್ದಾರೆ ಅವರಿಗೆ ನಿರಾಸೆಯಾಗುತ್ತದೆ. ಹಣದ ದುರುಪಯೋಗವನ್ನು ಸುಗುಮವಾಗಿ ಮಾಡುವುದಕ್ಕೆ ಮತ್ತೊಂದು ದಾರಿ ಮಾಡಿಕೊಟ್ಟ ಹಾಗೆ ಆಗುತ್ತದೆ. ದಯಮಾಡಿ ಆ ಕೆಲಸವನ್ನು ತಾವು ಮಾಡಬಾರದು. ಸಾಪರಾರು ಕೋಟಿ ರೂಪಾಯಿಗಳಷ್ಟು ಹಣ ಈ ರೀತಿಯಾಗಿ ಲ್ಯಾಪ್ಸ್ ಆಗಿ ಹೋಗಿದೆ. 25 ಭಾಗ ಕೂಡ ಕೆಲಸ ಆಗುವುದಿಲ್ಲ. ಸುಳ್ಳು ಲೆಕ್ಕದ ಬಿಲ್ ಮಾಡಿಸುವುದೇ ಒಂದು ಕೆಲಸ. ಕೆಲವು ಇಂಜಿನಿಯರ್‌ಗಳು ಜೇಬಿನಲ್ಲಿ ಹಣ ಇಟ್ಟುಕೊಂಡು ಕೆಲವು ಗುತ್ತಿಗೆದಾರರಿಗೆ ಸಾಲ ಕೊಡುತ್ತಾರೆ. ಅಡ್ವಾನ್ಸ್ ಬಿಲ್ ಡ್ರಾ ಮಾಡಿ ಇಟ್ಟುಕೊಂಡಿರುತ್ತಾರೆ. ಇದನ್ನೆಲ್ಲಾ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ. ಈ ವಿಧೇಯಕವನ್ನು ಪಾಸ್ ಮಾಡಿಕೊಟ್ಟರೆ ಅವರಿಗೆಲ್ಲಾ ರೊಟ್ಟಿಗೆ ತುಪ್ಪ ಹಾಕಿಕೊಟ್ಟಂಥ ಸಂತೋಷವಾಗುತ್ತದೆ. ಆ ಜನರನ್ನು ತೃಪ್ತಿಪಡಿಸಲಿಕ್ಕಾಗಿ, ಆ ಜನರು ಹಬ್ಬ ಮಾಡಲಿಕ್ಕಾಗಿ ಈ ರಾಜ್ಯದ ಜನರ ತೆರಿಗೆ ಹಣವನ್ನು ದುರುಪಯೋಗ ಮಾಡಲಿಕ್ಕೆ ದಯಮಾಡಿ ಅವಕಾಶ ಮಾಡಿಕೊಡಬಾರದು. ಇಂಥ ಒಂದು ತಪ್ಪು ಮೆಸೇಜ್ ಸದನದ ಕಡೆಯಿಂದ ಹೋಗಬಾರದು. ಹಿಂದಿನ ರೀತಿಯಲ್ಲಿ ಟೆಂಡರ್ ಕರೆದು ಮಾಡಿಸುವುದರಿಂದ ತಡವಾದರೂ ಅಡ್ಡಿಯಿಲ್ಲ. ದಯಮಾಡಿ ಈ ಬಿಲ್ಲನ್ನು ವಾಪಸ್ಸು ಪಡೆಯಿರಿ ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಶ್ರೀನಿವಾಸಗೌಡ(ಕೋಲಾರ): ಮಾನ್ಯ ಅಧ್ಯಕ್ಷರೆ, ಹಿಂದೆ ಪಾರದರ್ಶಕತೆ ಕಾನೂನನ್ನು ತಂದಾಗ ನಿಜವಾಗಿಯೂ ನಾವೆಲ್ಲಾ ಸಂತೋಷಪಟ್ಟಿವು. ಈ ಸಣ್ಣಪುಟ್ಟ ಕಂಟ್ರಾಕ್ಟರ್‌ಗಳು ನಮ್ಮ ಕಡೆಯಿಂದ ಸ್ವಲ್ಪ ದೂರ ಇರುತ್ತಾರೆ. ಮಾನ್ಯ ಕಾನೂನು ಸಚಿವರೇ ನಿಮಗಂತೂ ಕಂಟ್ರಾಕ್ಟ್ ಕೆಲಸ ಕೊಡಿ ಎಂದು ಬರುವವರು ಜಾಸ್ತಿ. ನೀವು ವಿಧಾನಸೌಧದಲ್ಲಿ ಕುಳಿತುಕೊಂಡಿರಬೇಕಾಗುತ್ತದೆ. ನೀವು ಕೆಲಸ ಮಾಡಿಸುವ ಜಾಗದಲ್ಲಿ ಹೋಗಿ ನೋಡುವುದಕ್ಕಾಗುವುದಿಲ್ಲ. ಕಂಟ್ರಾಕ್ಟ್ ಕೆಲಸವನ್ನು ಮಾಡಿಸುವ ಸಲುವಾಗಿ ನಿಮ್ಮ ಹತ್ತಿರ ಬಂದು ಕೇಳಿದವರಿಗೆ ಕೊಟ್ಟುಬಿಡುತ್ತೀರಿ. ಅಲ್ಲಿ ಸರಿಯಾಗಿ ಕೆಲಸ ಮಾಡದಿದ್ದರೆ, ಮುಂದೆ ನೀವು ಆ ಊರಿಗೆ ಹೋದಾಗ - ನೋಡಿ ಸರ್, ನೀವು ಹೀಗೆ ಕೆಲಸ ಮಾಡಿಸಿದ್ದೀರಿ, ಮುಂದೆ ನಿಮಗೆ ಹೇಗೆ ಓಟು ಹಾಕುವುದು ಎಂದು ಕೇಳುತ್ತಾರೆ, ಎಲ್ಲಾ ಕೆಲಸದಲ್ಲೂ ಪಾರದರ್ಶಕತೆ ಇರಬೇಕೆಂದು ಹಿಂದೆ ಪಾರದರ್ಶಕ ಆಕ್ಟ್‌ನ್ನು ತಂದು, ಈಗ ಇನ್ನೊಂದು ಬಿಲ್ಲ್‌ನ್ನು ತಂದು ಹಿಂದಿನ ಬಿಲ್ ಎಲ್ಲಿಯೂ ಕೆಲಸಕ್ಕೆ ಬಾರದ ಹಾಗೆ ಮಾಡಿದ್ದಾರೆ. ನಮ್ಮ ಪುತ್ರರಾದ ಶ್ರೀ ಜ್ಞಾನೇಂದ್ರ ಅವರು ಹೇಳಿದ ಹಾಗೆ ತಮ್ಮ ತಮ್ಮ ಹಿಂದೆ ಇರುವಂಥ ಹಿಂಬಾಲಕರಿಗೆ ಕೆಲಸ ಕೊಡಿಸಬೇಕೆನ್ನುವಂಥ ಒಂದೇ ಒಂದು ಕಾರಣಕ್ಕಾಗಿ ಸರ್ಕಾರ ಈ ಬಿಲ್ಲ್‌ನ್ನು ತಂದಿದೆ.

ಇದರಲ್ಲಿ ಎರಡನೇ ಮಾತೇ ಇಲ್ಲ.

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು(ಮಾನ್ವಿ): ಮಾನ್ಯ ಅಧ್ಯಕ್ಷರೆ, ಇಲ್ಲಿ ಆಡಳಿತ ಪಕ್ಷದವರ ಮೇಲೆ ಆಪಾದನೆ ಮಾಡಬೇಕೆಂಬ ಉದ್ದೇಶದಿಂದಲೇ ಮಾತನಾಡುವಂಥ ರೀತಿಯನ್ನು ನೋಡುತ್ತಿದ್ದೇವೆ. ನಾನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅಧ್ಯಕ್ಷನಾಗಿದ್ದೇನೆ. ಅದರಲ್ಲಿ ಸುಮಾರು 39 ಶಾಸಕರು ಸದಸ್ಯರಾಗಿದ್ದಾರೆ ಮತ್ತು ವಿರೋಧ ಪಕ್ಷದ ಸದಸ್ಯರೂ ಕೂಡ ಸದಸ್ಯರಾಗಿದ್ದಾರೆ. ಈಗಾಗಲೇ ಮೂರು ಬೋರ್ಡ್ ಮೀಟಿಂಗ್‌ನಲ್ಲಿ ಈ ವಿಚಾರ ಚರ್ಚೆಗೆ ಬಂದು ಒಂದು ಲೆಟರ್ ಪ್ಯಾಡ್‌ನಲ್ಲಿ ಪಕ್ಷಾತೀತವಾಗಿ ಎಲ್ಲಾ ಶಾಸಕರು ಸಹಿ ಮಾಡಿ ಅದರೊಂದಿಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿದ್ದೇವೆ. ಅದನ್ನು ಇಲ್ಲಿ ಪ್ರೊಡ್ಯೂಸ್ ಮಾಡಿ ಎಂದು ಹೇಳಿದರೆ ಪ್ರೊಡ್ಯೂಸ್ ಮಾಡುವುದಕ್ಕೆ ಸಹಿತ ನಾನು ಸಿದ್ಧನಿದ್ದೇನೆ. ವೈಯಕ್ತಿಕವಾಗಿ ಯಾರ ಮೇಲಾದರೂ ಹೇಳಲಿ. ಆದರೆ ಆಡಳಿತ ಪಕ್ಷದ ಸದಸ್ಯರೆಲ್ಲರನ್ನೂ ದೂಷಣೆ ಮಾತಕ್ಕಂಥಾದ್ದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಇವತ್ತು ಇರತಕ್ಕಂಥ ರೆಕಾರ್ಡ್ಸ್ ಸಹಿತ ನಾನು ತೋರಿಸುತ್ತೇನೆ. ಈಗ ಸಹ ವಿರೋಧ ಪಕ್ಷದ ಸಾಲಿನಲ್ಲಿ ಇರತಕ್ಕಂಥ ಮೂರು ಜನ ಶಾಸಕರು ನನ್ನ ಹತ್ತಿರ ಇಲ್ಲಿಗೆ ಬಂದು ನೀವು ಮಾತನಾಡಿ ಎಂದು ಹೇಳಿ ಹೊರಗೆ ಹೋದರು.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ: ಈ ಬಿಲ್‌ನ್ನು ಪಾಸ್ ಮಾಡಿಕೊಡುವುದರಿಂದ, ಈ ಒಂದು ಲಕ್ಷ ರೂ. ಅಥವಾ ಎರಡು ಲಕ್ಷ ರೂಪಾಯಿಗಳ ವೆಚ್ಚದ ಕೆಲಸವನ್ನು ಕಂಟ್ರಾಕ್ಟ್ ಕೊಟ್ಟರೆ ಆ ಕೆಲಸದ ಬಿಲ್ಲನ್ನು ಮಾಡಿ ಸ್ವತಃ ಇಂಜಿನಿಯರ್ ಡ್ರಾ ಮಾಡಿಕೊಂಡು ತನ್ನ ಜೇಬಿನಲ್ಲಿ ಇಟ್ಟುಕೊಳ್ಳುತ್ತಾನೆ. ಕೆಲಸ ಮಾಡಿಸಿದ ಕಂಟ್ರಾಕ್ಟರ್ ಹಣಕ್ಕಾಗಿ 24 ಗಂಟೆಯೂ ಆ ಇಂಜಿನಿಯರ್ ಹಿಂದೆಯೇ ಓಡಾಡಬೇಕಾಗುತ್ತದೆ. ನಂತರ ಆ ಕಂಟ್ರಾಕ್ಟರ್ ಬಿಲ್‌ನ ಹಣ ಪಡೆಯಬೇಕಾದರೆ ಆ ಇಂಜಿನಿಯರ್ ಇಂತಿಷ್ಟು ಎಂದು ಕೊಡಬೇಕಾಗುತ್ತದೆ. ಎಲ್ಲಾ ಇಂಜಿನಿಯರ್‌ಗಳು ಲಂಚ ತೆಗೆದುಕೊಳ್ಳುತ್ತಾರೆಂದು ನಾನು ಹೇಳುತ್ತಿಲ್ಲ. ಇವತ್ತು ಇಂಜಿನಿಯರುಗಳಿಗೆ ಲಂಚ ಕೊಡಬೇಕಾಗಿರುವುದೇ ಸುಮಾರು 42 ಪರ್ಸಂಟ್ ಆಗಿದೆ. ನಾನೂ ಕೂಡ ತಾಲ್ಲೂಕು ಅಭಿವೃದ್ಧಿ ಮಂಡಳಿಯಲ್ಲಿ ಕೆಲಸ ಮಾಡಿದ್ದೇನೆ. ಜಿಲ್ಲಾ ಪರಿಷತ್‌ನಲ್ಲಿ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಅಲ್ಲಿ ನಡೆಯುವಂಥ ಕೆಲವು ಇಂಜಿನಿಯರುಗಳ ಅವ್ಯವಹಾರಗಳು ಅಷ್ಟಿಷ್ಟಲ್ಲ. ಈ ತುಂಡು ಗುತ್ತಿಗೆ ಕಾನೂನನ್ನು ನಮ್ಮ ಸರ್ಕಾರ ಕೂಡ ಹಿಂದೆ ಮಾಡಿತ್ತು, ಇಲ್ಲ ಎಂದು ನಾನು

ಹೇಳುವುದಿಲ್ಲ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ಸರ್ಕಾರ ತುಂಡು ಗುತ್ತಿಗೆ ಕಾನೂನು ಮಾಡಿದ್ದು ತಪ್ಪು ಎಂದು ನಾವು ಅವರಿಗೆ ಹೇಳಿದ್ದೇವೆ. ಕಳೆದ ಸಾರಿ ನಾನು ಯಾವುದೋ ಒಂದು ವಿಷಯ ಮಾತನಾಡಿದಾಗ- ಯಾರು ಪಾರದರ್ಶಕತೆ ಆಕ್ಟ್‌ಗೆ ಒತ್ತುಕೊಡುವುದಿಲ್ಲವೋ ಅಂಥವರನ್ನು ಜೈಲಿಗೆ ಹಾಕಿಸುತ್ತೇವೆನ್ನುವಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಪುನಃ ಈ ಅಮೆಂಡ್‌ಮೆಂಟ್‌ನ್ನು ತಂದಿರುವುದು ಸರಿಯಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಂ.ಶಿವಣ್ಣ(ಹಣಕಾಸು ರಾಜ್ಯಸಚಿವರು):ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಸದಸ್ಯರುಗಳು ಏನೂ ಶಂಕೆ ವ್ಯಕ್ತಪಡಿಸಬೇಕಾದಂಥ ಸಂದರ್ಭವಿಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ ಗುತ್ತಿಗೆ ಎನ್ನತಕ್ಕಂಥಾದ್ದು ಇವತ್ತಿನಿಂದಲ್ಲ, ಅನೇಕ ವರ್ಷಗಳಿಂದ ಗುತ್ತಿಗೆ ಕೆಲಸ ಮಾಡುವುದು ನಡೆದು ಬಂದಿದೆ. ಗುತ್ತಿಗೆ ಕೆಲಸಗಳನ್ನು ಶಾಸನಬದ್ಧವಾಗಿ ಮಾಡಬೇಕೆಂದು ಇದನ್ನು ಈ ಇತಿಮಿತಿಯಲ್ಲಿ ಶಾಸನ ಮಾಡಿ ತಂದಂಥ ಕೀರ್ತಿ ನಮ್ಮ ಸರ್ಕಾರಕ್ಕೆ ಬರುತ್ತದೆ. ಈ ಮಸೂದೆಯನ್ನು ತಂದ ಮೇಲೆ ಅವರು ಕೂಡ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ, ನಾವೂ ಕೂಡ ವ್ಯಕ್ತಪಡಿಸಿದ್ದೇವೆ ಮತ್ತು ನಮಗೆ ಸಾಲ ನೀಡತಕ್ಕಂಥ ವಿಶ್ವಬ್ಯಾಂಕ್‌ನವರೂ ಕೂಡ ಸದರಿ ಮಸೂದೆ ಬಗ್ಗೆ ಬಾರೀ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಇಡೀ ರಾಷ್ಟ್ರದಲ್ಲಿ ಇಂಥ ಮಾದರಿಯಾದಂಥ ಶಾಸನ ಇರತಕ್ಕಂಥಾದ್ದು ಬಹುಶಃ ಕರ್ನಾಟಕ ರಾಜ್ಯದಲ್ಲಿ ಎಂದು ಹೇಳಿದ್ದಾರೆ. ಮೂಲ ಶಾಸನದಲ್ಲಿ ಎಲ್ಲಾ ಇಲಾಖೆಗಳ ಮೂಲಕವಾಗಿ 5 ಲಕ್ಷ ರೂಪಾಯಿಗಳವರೆಗೆ ಇದನ್ನು ಕೊಡತಕ್ಕಂಥ ಇತಿಮಿತಿ ಇದ್ದದ್ದು. ಈ ಪ್ರದೇಶಾಭಿವೃದ್ಧಿ ಮಂಡಳಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ ಇವುಗಳಿಗೆ ಈ ರಿಲ್ಯಾಕ್ಷೇಷನ್ ಸಿಗಲಿಲ್ಲ. ಇದನ್ನು ಅವುಗಳಿಗೂ ಕೂಡ ಅನ್ವಯವಾಗುವ ಹಾಗೆ ಯೂನಿಫಾರಂ ಆಗಿ ಇರಲಿ ಎಂದು ಮೂಲ ಶಾಸನಕ್ಕೆ ಒಂದು ಸಣ್ಣ ತಿದ್ದುಪಡಿಯನ್ನು ಇವತ್ತು ತಂದಿದ್ದೇವೆಯೇ ಏನಃ ಇದರಲ್ಲಿ ಬೇರೆ ಯಾವ ಉದ್ದೇಶವೂ ಇಲ್ಲ. ಪಾರದರ್ಶಕತೆ ಆಕ್ಟ್‌ನ್ನು ತಂದ ಮೇಲೆ ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಟೆಂಡರ್ ಟ್ರಾನ್ಸ್‌ಫರೆನ್ಸಿ ಇದೆಯೆಂದು ಎಲ್ಲರೂ ಕೂಡ ಎಚ್ಚರಿಕೆಯಿಂದ ಉತ್ತಮವಾದಂಥ ಕೆಲಸವನ್ನು ಮಾಡುವಂಥಾದ್ದು ಆಗಿದೆ. ಬಹು ಮುಖ್ಯವಾಗಿ ಈ ಅಮೆಂಡ್‌ಮೆಂಟ್‌ನ್ನು ತಂದಿರುವ ಉದ್ದೇಶ ಏನೆಂದರೆ, ಲೋಕಸಭಾ ಸದಸ್ಯರ ನಿಧಿಯಿಂದ ಒಬ್ಬ ಸದಸ್ಯರಿಗೆ ಎರಡು ಕೋಟಿ ರೂಪಾಯಿಗಳಂತೆ ನಮ್ಮ ರಾಜ್ಯಕ್ಕೆ ಬರುತ್ತದೆ. ಆ ಹಣ ಜಿಲ್ಲಾಧಿಕಾರಿಗಳ ಹತ್ತಿರ ಇರುತ್ತಿದ್ದು ಅದನ್ನು ತುರ್ತಾಗಿ ಖರ್ಚು ಮಾಡುವುದಕ್ಕೆ ಅವಕಾಶ ಇರಲಿಲ್ಲ. ಆ ಹಣವನ್ನು ಸಮಯಕ್ಕೆ ಸರಿಯಾಗಿ ಖರ್ಚು ಮಾಡದಿದ್ದರೆ ಮುಂದಿನ ಸಲ ಅಷ್ಟು ಹಣ ಬರುವುದಿಲ್ಲವೆಂದು, ಆ ಕಾರಣಕ್ಕಾಗಿ ಇಂಥ ಬಿಲ್ಲ್‌ನ್ನು ಮಾಡಿ ಎನ್ನುವ ಮನವಿ ಕೂಡ ಆ ಸದಸ್ಯರಿಂದ ಇದೆ. ನಮ್ಮ ಪಕ್ಷದವರಾಗಲೀ ಅಥವಾ ಬೇರೆಯವರಾಗಲೀ ತುಂಡು ಗುತ್ತಿಗೆಯನ್ನು ಕೊಟ್ಟು ಕೆಲಸ

ಮಾಡಿಸುವ ಸಲುವಾಗಿ ಈ ಬಿಲ್ಲನ್ನು ತರಬೇಕೆನ್ನುವ ಉದ್ದೇಶ ಸರ್ಕಾರದಲ್ಲಿ ಇಲ್ಲವೇ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಪಾರದರ್ಶಕತೆಗೆ ಏನು ಒತ್ತು ಕೊಡಬೇಕೆಂದು ನಮ್ಮ ಸರ್ಕಾರದಲ್ಲಿ ಇದೆ, ಅದಕ್ಕೆ ಬದ್ಧರಾಗಿದ್ದೇವೆ. 5 ಲಕ್ಷ ರೂಪಾಯಿಗಳವರೆಗಿನ ಕಾಮಗಾರಿಯನ್ನು ತೆಗದುಕೊಂಡರೆ ಇದರಲ್ಲಿ ತುಂಡು ಗುತ್ತಿಗೆ ಮಾಡತಕ್ಕಂಥ ಅವಕಾಶವಿಲ್ಲ. ಒಂದು ಸಮುದಾಯ ಭವನದ ನಿರ್ಮಾಣ ಅಥವಾ ಬೇರೆ ಕಾಮಗಾರಿಯನ್ನು 5 ಲಕ್ಷ ರೂಪಾಯಿಗಳವರೆಗೆ ತೆಗದುಕೊಳ್ಳತಕ್ಕಂಥ ಏನಾಯಿತಿ ಇರುವಂಥಾದ್ದು. ಅದನ್ನು ನಾವು ಇವತ್ತು ಬಿಲ್ ಮೂಲಕ ತಂದಿದ್ದೇವೆಯೇ ಹೊರತು ಬೇರೆ ರೀತಿಯ ಶಂಕೆಯನ್ನು ವ್ಯಕ್ತಪಡಿಸುವುದು ಬೇಡ. ಇನ್ನು ಇದಕ್ಕೆ ಹೆಚ್ಚು ಏವರಗಳು ಬೇಕಾಗಿಲ್ಲವೆಂದು ನನ್ನ ಭಾವನೆ. ಹಾಗಾಗಿ ತಾವು ಕಳೆದ ಬಾರಿ ಮೂಲ ಪಾರದರ್ಶಕತೆ ಆಕ್ಟ್‌ಗೆ ಯಾವ ರೀತಿ ಒಮ್ಮತದಿಂದ, ಸಂತೋಷದಿಂದ ಒಪ್ಪಿಗೆ ಕೊಟ್ಟಿದ್ದೀರಿ. ಅದೇ ರೀತಿ ಈ ಒಂದು ಸಣ್ಣ ತಿದ್ದುಪಡಿಗೆ ಒಪ್ಪಿಗೆ ಕೊಡಬೇಕೆಂದು ಏನಂತಿಸುತ್ತಾ, ಇದು ಮುಂದೆ ಬರತಕ್ಕಂಥ ಶಾಸಕರ ನಿಧಿಗೂ ಅನ್ವಯಿಸುತ್ತದೆ. ತುಂಡು ಗುತ್ತಿಗೆಗೆ ಕೊಡುವ ಸಲುವಾಗಿ ಇದನ್ನು ಮಾಡುತ್ತೇವೆನ್ನುವಂಥ ಶಂಕೆ ಯಾರಿಗೂ ಬೇಡವೇ ಬೇಡವೆಂದು ಹೇಳಿ, ಈ ಮಸೂದೆ ಪಾಸ್ ಆಗುವುದಕ್ಕೆ ಒಪ್ಪಿಗೆ ಕೊಡಬೇಕೆಂದು ಮತ್ತೊಮ್ಮೆ ಏನಂತಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸಾಕಷ್ಟು ಚರ್ಚೆಯಾಗಿ ಇದನ್ನು ಪಾಸ್ ಮಾಡಬೇಕೆಂದು ನಾವು ಹೇಳಿದೆವು. ಇವತ್ತು ಪಾರದರ್ಶಕತೆ ಬಗ್ಗೆ ಮಾತನಾಡುವಂಥ ಮುಖ್ಯಮಂತ್ರಿಗಳು ಇರಬಹುದು, ಈ ಸರ್ಕಾರದ ಮಂತ್ರಿಗಳಿರಬಹುದು, ಇವರ ನಿಜವಾದ ಮುಖವಾಡ ಇವತ್ತು ಹೊರಕ್ಕೆ ಬಿದ್ದಿದೆ. ಈ ಬಿಲ್‌ನ್ನು ಪಾಸ್ ಮಾಡಿಕೊಳ್ಳಲೇಬೇಕು. ಇವತ್ತು 5 ಲಕ್ಷ ರೂಪಾಯಿಗಳವರೆಗೆ ಟೆಂಡರ್ ಕರೆಯುವುದು ಬೇಡ, ನಂತರ 10 ಲಕ್ಷ ರೂಪಾಯಿಗಳವರೆಗೆ ಟೆಂಡರ್ ಬೇಡ ಎಂದು ಮಾಡುತ್ತೀರಿ. ಅದಕ್ಕಾಗಿ ಇವತ್ತು ಈ ಬಿಲ್‌ನ್ನು ಪಾಸ್ ಮಾಡಲಿಲ್ಲವೆನ್ನುವ ಕಾರಣಕ್ಕಾಗಿ ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಹಿಂದೆ ಆದಂಥ ತುಂಡು ಗುತ್ತಿಗೆಗಳೇ ಬೇರೆ, ಇದು ಬೇರೆ. ಇಲ್ಲಿ ಇರತಕ್ಕಂಥಾದ್ದು ಏನೆಂದರೆ ಕುಡಿಯುವ ನೀರಿಗಾಗಿ, ಒಂದೂವರೆಯಿಂದ ಎರಡು ಲಕ್ಷ ರೂಪಾಯಿಗಳ ಒಳಗಡೆ

ಆಗತಕ್ಕಂಥ ಶಾಲಾ ಕಟ್ಟಡ ಏನಿತ್ತು ಅದನ್ನು ನಮ್ಮ ಏರಿಯಾ ಡೆವಲಪ್‌ಮೆಂಟ್ ಫಂಡ್ಸ್ ಏನಿದೆ ಪರ್ಟಿಕ್ಯುಲರಿಲಿ ಹೆಚ್‌ಕೆಡಿಬಿ, ಎಂ.ಪಿ.ಫಂಡ್ಸ್, ಬಯಲುಸೀಮೆ, ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿಗಳ ಫಂಡ್ಸ್ ಆಗಲೀ ಅಥವಾ ಎಂ.ಎಲ್.ಎ.ಗಳ ಫಂಡ್ಸ್ ಆಗಲೀ ಇದಕ್ಕೆ 5 ಲಕ್ಷ ರೂಪಾಯಿಗಳವರೆಗೆ ಸೀಮಿತವಾಗಿ ಇರತಕ್ಕಂಥ ಕೆಲಸವನ್ನು ಮಾತ್ರ ಮಾಡತಕ್ಕಂಥಾದ್ದು ಇದರಲ್ಲಿ 100 ಕೋಟಿ ರೂಪಾಯಿಗಳ ಕಾಮಗಾರಿಯನ್ನು ತುಂಡು ತುಂಡು ಮಾಡಿ ಐದೈದು ಲಕ್ಷ ರೂಪಾಯಿಗಳ ಕಾಮಗಾರಿಯನ್ನು ಕೊಡುವುದಕ್ಕೆ ಆಗುವುದಿಲ್ಲ. Condition has been laid down. 10 ಲಕ್ಷ ರೂ.ಗಳ ಕೆಲಸವನ್ನು ಸ್ಪ್ಲಿಟ್ ಮಾಡಿ ಐದೈದು ಲಕ್ಷವೆಂದು ಮಾಡುವುದಕ್ಕೆ ಬರುವುದಿಲ್ಲ. ಕೇವಲ 5 ಲಕ್ಷದ ರೂಪಾಯಿಗಳ ಅಂದಾಜು ಇರುವುದು ಮಾತ್ರ ಬರುತ್ತದೆ. ಅದರಲ್ಲಿ ಇದು ಸ್ಪಷ್ಟವಾಗಿ ಇದೆ. ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ಹಿಂದೆ ನೂರು ಕೋಟಿ ರೂಪಾಯಿಗಳ ಕೆಲಸವನ್ನು ಐದೈದು ಲಕ್ಷಕ್ಕೆ ಮಾಡಿದರು ಎಂದು ಹೇಳಿದರು, ಅದು ಆ ರೀತಿ ಇಲ್ಲ. ಪ್ರತಿ ವರ್ಷ ನಮಗೆ ಎರಡೆರಡು ಕೋಟಿ ರೂಪಾಯಿಗಳು ಬಂದರೆ ಅದನ್ನು ನಾವು ಯಾರಿಗೋ ಸಮುದಾಯ ಭವನಕ್ಕೆ 5 ಲಕ್ಷ ರೂ. ಕೊಡುತ್ತೇವೆ, ಮತ್ತೊಂದು ಎರಡು ಕಿಲೋಮೀಟರ್ ರಸ್ತೆ ಕೆಲಸಕ್ಕಾಗಿ 5 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ, ಇದನ್ನು ಆ ವರ್ಷದೊಳಗೆ ಖರ್ಚು ಮಾಡದೇ ಹೋದರೆ ನಮಗೆ ಪುನಃ ಬಿಲ್ ಬರುವವರೆಗೆ ಕಾಯಬೇಕಾಗುತ್ತದೆ, ಏಕೆಂದರೆ, ಅದರ ಖರ್ಚು ಎಲ್ಲವನ್ನು ತೋರಿಸಿ ಅದನ್ನು ರೆಮಿಟ್ ಆಗುವವರೆಗೆ ನಮಗೆ ಹಣ ಸಿಗುವುದಿಲ್ಲ. ಅದಕ್ಕಾಗಿ ತ್ವರಿತಗತಿಯಲ್ಲಿ ಕೆಲಸ ಆಗಬೇಕಾದರೆ ಕನಿಷ್ಠ 5 ಲಕ್ಷಕ್ಕೆ ಸೀಮಿತವಾಗಿರುವ ಅಂದಾಜುಗಳಿಗೆ ಮಾತ್ರ ರಿಯಾಯಿತಿ ಕೊಡಿ ಎಂದು ಅವರು ಕೇಳಿದ್ದರು, ಹೆಚ್‌ಕೆಡಿಬಿ-ಯಲ್ಲಿನ ಅನೇಕ ಜನ ಕೇಳಿದ್ದಾರೆ, ಆ ಕಡೆ ಕುಳಿತಿರುವ ಅನೇಕ ಜನ ಮಾನ್ಯ ಸದಸ್ಯರು ಕೇಳಿದ್ದಾರೆ, ಆದ್ದರಿಂದ, ಇದು ಒಳ್ಳೆಯ ಉದ್ದೇಶದಿಂದ ತಂದಿರುವ ಮಸೂದೆಯಾಗಿದೆಯೇ ಏನಃ ದುರುದ್ದೇಶದಿಂದ ತಂದಿರುವ ಮಸೂದೆಯಲ್ಲ. ಅಥವಾ ದೊಡ್ಡ ದೊಡ್ಡ ಕೆಲಸಗಳನ್ನು ಸ್ಪ್ಲಿಟ್ ಮಾಡಿ ಬೇರೆಯವರಿಗೆ ಬೇಕಾದಂಥವರಿಗೆ ಕೊಡತಕ್ಕಂಥಾದ್ದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸುಮಾರು ಹತ್ತು ಸಾರಿ ಇದರ ಬಗ್ಗೆ ಯೋಚಿಸಿದ್ದಾರೆ, ನಿಜ ಹೇಳಬೇಕೆಂದರೆ, ಈಗ ಎಷ್ಟು ಇತ್ತೋ ಅಷ್ಟೇ ಇರಲಿ ಎಂದಿದ್ದವರು, ಈ ಸಾರ್ವಜನಿಕ ಒತ್ತಡ ಹಾಗೂ ಅವರು ಕೊಟ್ಟಂಥ ಮನವಿಯ ಮೇರೆಗೆ ಈ ಕಾನೂನು ತಂದಿದ್ದೇವೆಂದು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಇಲ್ಲಿ ನಮ್ಮ ವ್ಯವಸ್ಥೆ ಹೇಗಿದೆ ಎಂದರೆ, ನಾನು ಇಲ್ಲೊಂದು ರಾಜಕೀಯ ಪಕ್ಷವನ್ನು ಪ್ರತಿನಿಧಿಸುತ್ತೇನೆ. By that virtue I

have become the leader of that party here. ಯಾರೋ ನಾಲ್ಕು ಜನ ಸಹಿ ಮಾಡಿದ್ದಾರೆ ಎಂದಾಕ್ಷಣವೇ ಅದು ನಮ್ಮ ಪಕ್ಷದ ನಿರ್ಧಾರವಾಗಲಿಕ್ಕೆ ಸಾಧ್ಯವಿಲ್ಲ. I also represent my political party and philosophy here. ಮಾನ್ಯ ನಾರಾಯಣರವರು, ಮಾನ್ಯ ಬೋಸರಾಜುರವರು ಪ್ರಾಕ್ಟಿಕಲ್ ಆಗಿ ಕೆಲಸ ಮಾಡತಕ್ಕಂಥವರು ನಾನು ಅದನ್ನು ಇಲ್ಲವೆಂದು ಹೇಳುವುದಿಲ್ಲ. ಮಾನ್ಯ ಗೃಹ ಸಚಿವರು, ನೂರು ಕೋಟಿ ರೂಪಾಯಿಗಳ ಕೆಲಸವನ್ನು ಐದೈದು, ಹತ್ತು ಲಕ್ಷಕ್ಕೆ ತುಂಡು ಗುತ್ತಿಗೆಗೆ ಕೊಟ್ಟಿದ್ದೀರೆಂದು ಹಿಂದಿನ ಸರ್ಕಾರದ ಮೇಲೆ ಆಪಾದನೆ ಮಾಡಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ಮಾಡುವುದಕ್ಕೆ ಅವಕಾಶವಿಲ್ಲ ಹಾಗೆ ಮಾಡಿದರೆ ರಿಕ್ಷೆ ಇದೆ. ಇದು ಮುಂಚೆ ಇರಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಪಿಎಸಿ-ನಲ್ಲಿ ಮತ್ತೊಂದು ಕಮಿಟಿಯಲ್ಲಿ ಆಗಿದೆ ಎಂದು ಹೇಳಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಕಳೆದ ಅಧಿವೇಶನದಲ್ಲಿ ಮಾನ್ಯ ಕೆ.ಬಿ.ಮಲ್ಲಿಕಾರ್ಜುನ್‌ರವರು ಬಹಳ ಮುಖ್ಯವಾದ ವಿಚಾರವನ್ನು ನಮ್ಮ ಮುಂದಿಟ್ಟಿದ್ದಾರೆ. 8 ತಿಂಗಳ ಹಿಂದೆ ಪಾರದರ್ಶಕತೆ ಎನ್ನುವ ಕಾನೂನು ತಂದು, ಅದರಲ್ಲಿ ಒಂದು ಲಕ್ಷ ರೂ. ಮೇಲ್ಪಟ್ಟು ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕು ಎನ್ನುವ ಕಾನೂನು ತಂದಿದ್ದೀರಿ, ಈಗ ಅದನ್ನು 5 ಲಕ್ಷಗಳವರೆಗೆ ಟೆಂಡರ್ ಕರೆಯಬಾರದು, ಹಾಗೆಯೇ ಕೊಡಬೇಕು ಎನ್ನುವುದಾದರೆ ಈ ನಾಲ್ಕು ತಿಂಗಳೊಳಗೆ ಆಗಿರುವ ಬದಲಾವಣೆಗಳೇನು? ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವುದೆಲ್ಲಾ ಸತ್ಯಾಂಶವೇ? ಲೋಕಸಭೆ ಸದಸ್ಯರಾಗಲಿ, ರಾಜ್ಯಸಭೆ ಸದಸ್ಯರಾಗಲಿ, ಮತ್ತೊಬ್ಬರಿಗಾಗಲಿ, ಅವರಿಗೆ ಬೇಕಾದಂಥವರಿಗೆ ಗುತ್ತಿಗೆ ಕೊಡತಕ್ಕಂಥಾದ್ದು ಮತ್ತು ಆ ವರ್ಕಗಳನ್ನು ಸ್ಪ್ಲಿಟ್ ಮಾಡತಕ್ಕಂಥಾದ್ದು, ಇದನ್ನು ನಾವು ವಿರೋಧಿಸುತ್ತೇವೆ. ಇವರ ನಿಜವಾದ ಪಾರದರ್ಶಕತೆ ಎನ್ನುವ ಮುಖವಾಡ ಏನಿದೆ ಅದು ಕಳಚಿ ಬಿದ್ದಿದೆ, ಇದನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಸಂಯುಕ್ತ ಜನತಾದಳದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿ.ಚೆನ್ನಿಗಪ್ಪ: ನಾವು ಕೂಡ ಇದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳದ (ಎಸ್) ಗುಂಪಿನ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''2001ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು: ''ಖಂಡ 2 ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಸಲ್ಪಟ್ಟಿತು

(ಖಂಡ 2 ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಶಿವಣ್ಣ(ರಾಜ್ಯ ಹಣಕಾಸು ಸಚಿವರು, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ''2001ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''2001ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.